ಉಪನಿರ್ದೇಶಕರ ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ, ಕೋಲಾರ ಜಿಲ್ಲೆ, ಕೋಲಾರ

2019- 20 ನೇ ಸಾಲಿನ "ನನ್ನನ್ನೊಮ್ಮೆ ಗಮನಿಸಿ" ಪ್ರಶ್ನೆಕೋಠಿ

10ನೇ ತರಗತಿ ಪ್ರಥಮ ಭಾಷೆ ಕನ್ನಡ

ಭಾಗ- ಎ

I. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ಪೂರ್ಣ ವಾಕ್ಯದೊಂದಿಗೆ ಉತ್ತರಿಸಿ :

1. ರಾಹಿಲನು ಯಾರು ?
2. ರಾಹಿಲನು ತುರ್ತುಪರಿಸ್ಥಿತಿ ನಿರ್ವಹಣೆಗೆ ಭದ್ರವಾಗಿ ಹಿಡಿದುಕೊಂಡಿದ್ದೇನು ?
3. ಗಡಿ ಪ್ರದೇಶಗಳಲ್ಲಿ ಬ್ಲಾಕ್ ಔಟ್ ನಿಯಮವನ್ನು ಏತಕ್ಕಾಗಿ ಪಾಲಿಸಲಾಗುತ್ತದೆ ?
4. ಯುದ್ಧದ ಬಗೆಗೆ ಮುದುಕಿಯ ಅಭಿಪ್ರಾಯವೇನು ?
5. ಶ್ರೀರಾಮನ ತಂದೆಯ ಹೆಸರೇನು ?
6. ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಯಾರು ?
7. ರಾಮ ಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ಯಾರು ?
8. ಶ್ರೀರಾಮನಿಗೆ ಸಮರ್ಪಿಸಲು ಶಬರಿ ಏನನ್ನು ಸಂಗ್ರಹಿಸಿದ್ದಳು ?
9. ಶ್ರೀರಾಮನ ದರ್ಶನದ ನಂತರ ಶಬರಿ ಬಯಸಿದ್ದು ಏನನ್ನು ?
10. ನೆಲ್ಸನ್ ರವರ ಮೂರ್ತಿಯಿರುವ ಸ್ಥಳದ ಹೆಸರೇನು ?
11. "ವೆಸ್ಟ್ ಮಿನಿಸ್ಟರ್ ಅಬೆ" ಯಾರ ಸ್ಮಾರಕವಾಗಿದೆ ?
12. ನಾಲ್ವಡಿ ಕೃಷ್ಣರಾಜ ಒಡೆಯರು ಯಾವುದಕ್ಕಾಗಿ ಕಂಕಣಬದ್ಧರಾದರು ?
13. ಬ್ರಿಟೀಷ್ ಸರ್ಕಾರ ವಿಶ್ವೇಶ್ವರಯ್ಯ ಅವರಿಗೆ ಯಾವ ಪದವಿಯನ್ನು ನೀಡಿ ಗೌರವಿಸಿತು ?
14. ವಿಶ್ವೇಶ್ವರಯ್ಯ ಅವರ ಹುಟ್ಟು ಹಬ್ಬದ ನೆನಪಿಗಾಗಿ ಯಾವ ದಿನಾಚರಣೆಯನ್ನು ಮಾಡಲಾಗುತ್ತಿದೆ ?
15. ಇಂದಲ್ಲ- ನಾಳೆ ಫಲ ಕೊಡುವ ಅಂಶಗಳು ಯಾವುವು ?
16. ಮನೆ ಮಂಚಮ್ಮ ಯಾರು ?
17. ಮನೆ ಮಂಚಮ್ಮನ ಕತೆ ಹೇಳಿದ ಕವಿಯ ಹೆಸರೇನು ?
18. "ಶಿವಾನುಭವ ಶಬ್ದಕೋಶ" ಪುಸ್ತಕ ಬರೆದವರು ಯಾರು ?
19. ವಚನಕಾರರಿಗೆ ಯಾವುದು ದೇವರಾಗಿತ್ತು ?
20. ಅಶೋಕ ಪೈ ಅವರ ವೃತ್ತಿ ಯಾವುದು ?
21. ದೇವನೂರರ ನನ್ನ 'ದೇವರು' ಯಾರೆಂಬುದನ್ನು ಸ್ಪಷ್ಟೀಕರಿಸಿ ?
22. ಭಗವದ್ಗೀತೆಯನ್ನು ರಚಿಸಿದವರು ಯಾರು ?
23. ಹುಲಿಗೆ ಪರಮಾನಂದವಾಗಲು ಕಾರಣವೇನು ?

24. ಶಾನುಭೋಗರ 'ಬ್ರಹ್ಮಾಸ್ತ್ರ' ಯಾವುದು ?

25. ಹಸಿದು ಮಲಗಿದ್ದ ಹುಲಿಯು ಏನೆಂದು ಯೋಚಿಸಿತು ?

26. ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ ಯಾವ ಆರೋಪವನ್ನು ಹೊರಿಸಿದನು ?

27. ಧರ್ಮಬುದ್ಧಿಯು ತನ್ನ ಬೆಳಗಿನ ಹೊತ್ತನ್ನು ಹೇಗೆ ಕಳೆದನು ?

28. ಧರ್ಮಾಧಿಕರಣರು ವಟವೃಕ್ಷದ ಸಮೀಪಕ್ಕೆ ಏಕೆ ಬಂದರು ?

29. ಸುಕುಮಾರಸ್ವಾಮಿಗೆ ಯಾವ ಪಟ್ಟವನ್ನು ಕಟ್ಟಲಾಯಿತು ?

30. ಯಶೋಭದ್ರೆಯು ರತ್ನ ಕಂಬಳಿಗಳನ್ನು ಯಾರಿಗೆ ಕೊಟ್ಟಳು ?

31. ಅರಸ ವೃಷಭಾಂಕನ ಉಂಗುರವು ಯಾವಾಗ ಕೆಳಕ್ಕೆ ಬಿದ್ದಿತು ?

32. ನದ ಜಲಗಳು ಏನಾಗಿವೆ ?

33. ಯಾವುದಕ್ಕೆ ಮುಂಗಾರಿನ ಮಳೆಯಾಗಬೇಕೆಂದು ಜಿ.ಎಸ್.ಶಿವರುದ್ರಪ್ಪನವರು ಅಭಿಪ್ರಾಯಪಟ್ಟಿದ್ದಾರೆ ?

34. ಕಾಡು ಮೇಡುಗಳ ಸ್ಥಿತಿ ಹೇಗಿದೆ ?

35. ಯಾವ ಎಚ್ಚರದೊಳು ಬದುಕ ಬೇಕಿದೆ ?

36. ಹಕ್ಕಿಯ ಗರಿಯಲ್ಲಿ ಯಾವ ಬಣ್ಣಗಳಿವೆ ?

37. ಹಕ್ಕಿಯು ಯಾವುದರ ಸಂಕೇತವಾಗಿದೆ ?

38. ಹಕ್ಕಿಯು ಯಾರ ನೆತ್ತಿಯನ್ನು ಕುಕ್ಕಿದೆ ?

39. ಹಕ್ಕಿಯು ಯಾರನ್ನು ಹರಸಿದೆ ?

40. ಕಾಲ ಪಕ್ಷಿಯ ಕಣ್ಣುಗಳು ಯಾವುವು ?

41. ಹಕ್ಕಿಯ ಚುಂಚಗಳು ಎಲ್ಲಿಯವರೆಗೆ ಚಾಚಿವೆ ?

42. ಕುಂಪಣಿ ಸರಕಾರ ಹೊರಡಿಸಿದ ಆದೇಶ ಏನು ?

43. ಹಲಗಲಿಯ ನಾಲ್ವರು ಪ್ರಮುಖರು ಯಾರು ?

44. ಹಲಗಲಿ ಗ್ರಾಮ ಎಲ್ಲಿದೆ ?

45. ಶ್ರೀಕೃಷ್ಣನು ಕರ್ಣನನ್ನು ರಥದಲ್ಲಿ ಕೂರಿಸಿಕೊಳ್ಳುವಾಗ ಏನೆಂದು ಕರೆದನು ?

46. ಅಶ್ವಿನಿ ದೇವತೆಗಳ ವರಬಲದಿಂದ ಜನಿಸಿದವರು ಯಾರು ?

47. ಅಶ್ವಯುಜದ ಭತ್ತದ ಗದ್ದೆಯ ಬಣ್ಣ ಯಾವ ಹಸುರಿನಂತಿದೆ ?

48. 'ಹಸುರು' ಎಂಬುದು ಯಾವುದನ್ನು ಕಂಡು ಪ್ರೇರಿತವಾದ ಕವನವಾಗಿದೆ ?

49. 'ದಿನಪಸುತ' ಯಾರು ?

50. 'ಅಂತಕಾತ್ಮಜ' ಎಂದರೆ ಯಾರು ?

51. ಲವನು ಕುದುರೆಯನ್ನು ಯಾವುದರಿಂದ ಕಟ್ಟಿದನು ?

52. 'ಜೈಮಿನಿ ಭಾರತ' ಕಾವ್ಯವನ್ನು ಬರೆದ ಕವಿ ಯಾರು ?

53. ಯಜ್ಞಾಶ್ವವನ್ನು ಕಟ್ಟಿದವರು ಯಾರು ?

54. ಮುನಿಸುತರು ಹೆದರಲು ಕಾರಣವೇನು ?

55. ದ್ರೋಣನು ಯಾರೊಡೊನೆ ಪರಶುರಾಮನ ಬಳಿಗೆ ಬಂದನು ?

56. ದ್ರುಪದನು ಪಡಿಯರನಿಗೆ ಏನೆಂದು ಹೇಳಿ ಕಳುಹಿಸಿದನು ?

57. ಪುಟ್ಟ ಪೋರಿ ಏನು ಮಾಡುತ್ತಿದ್ದಾಳೆ ?

58. ಅಮ್ಮ ಎಲ್ಲಿ ಮಲಗಿದ್ದಾಳೆ ?

59. ಒಡೆಯನ ಅಂಗಳದಲ್ಲಿ ಏನು ಮೈತುಂಬಿ ನಿಂತಿವೆ ?

60. ಮುದುಕಿಯ ಸೊಸೆ ತನ್ನ ಜೀವವನ್ನೇ ಪಣಕ್ಕಿಟ್ಟಿರುವುದೇಕೆ ?

61. ಉರಿವ ಬತ್ತಿಯ ಕರುಕ ಕಾಣರು ಯಾರು ?

62. ಭೂಮಿ ಜಾತೆ ಯಾರು ?

63. ರಾಮನಿಂದ ಶಬರಿ ಬಯಸುವುದು ಏನನ್ನು ?

64. ವೆಸ್ಟ್ ಮಿನಿಸ್ಟರ್ ಅಬೆಯಲ್ಲಿರುವ ಸಿಂಹಾಸನದ ಹೆಸರೇನು ?

65. "ಮನೆ ಹಿಡಿದು ಇರುವ ತರುಣನ ಬುದ್ಧಿ ಮನೆಯ ಮಟ್ಟದ್ದೇ" ಇದು ಯಾರ ನುಡಿಯಾಗಿದೆ ?

66. ಸಾಮಾಜಿಕ ಕಾನೂನುಗಳ ಹರಿಕಾರ ಎಂಬ ಕೀರ್ತಿಗೆ ಭಾಜನರಾದವರಾರು ?

67. ವಿಶ್ವೇಶ್ವರಯ್ಯನವರು ಎಲ್ಲ ಸಮಸ್ಯೆಗಳಿಗೆ ಯಾವುದು ಪರಿಹಾರ ಎಂದು ನಂಬಿದ್ದರು ?

68. ಮೈಸೂರಿನ ಆಡಳಿತವನ್ನುಮುಕ್ತಕಂಠದಿಂದ ಹೊಗಳಿದವರು ಯಾರು ?

69. ಮಂಚಮ್ಮ ದೇವತೆ ತನಗೆ ಗುಡಿಮನೆ ಬೇಡ ಎನ್ನಲು ಕಾರಣವೇನು ?

70. ಶಾನುಭೋಗರಿಗೆ ಹುಲಿ ಎಲ್ಲಿ ಎದುರಾಯಿತು ?

71. ಲೇಖಕರ ಪ್ರಕಾರ ಶಾನುಭೋಗರ ಪ್ರಾಣ ಉಳಿದದ್ದು ಯಾವುದರಿಂದ ?

72. ಶಾನುಭೋಗರಿಗೆ ತಲೆ ಸುತ್ತಲಾರಂಭಿಸಿದ್ದು ಏಕೆ ?

73. ಹೊನ್ನನ್ನು ಬಚ್ಚಿಟ್ಟಿರುವುದಕ್ಕೆ ಯಾರನ್ನು ಸಾಕ್ಷಿ ಎಂದು ದುಷ್ಟಬುದ್ಧಿ ಹೇಳುತ್ತಾನೆ ?

74. ದುಷ್ಟಬುದ್ಧಿ ಸುಳ್ಳು ಸಾಕ್ಷಿ ಹೇಳಿಸಲು ಯಾರನ್ನು ಒತ್ತಾಯಿಸಿದರು ?

75. ಪ್ರೇಮಮತಿಯ ಸಾವಿಗೆ ಧರ್ಮಾಧಿಕರಣರು ಕೊಟ್ಟ ಕಾರಣವೇನು ?

76. ¸Àಸುಕುಮಾರಸ್ವಾಮಿಗಾದ ವಿಸ್ಮಯವೇನು ?

77. ಸುಕುಮಾರಸ್ವಾಮಿಯ ಕಣ್ಣಲ್ಲಿ ನೀರು ಬರಲು ಕಾರಣವೇನು ?

78. ಪ್ರೀತಿಯ ಹಣತೆಯನ್ನು ಎಲ್ಲಿ ಹಚ್ಚೋಣವೆಂದು ಜಿ.ಎಸ್.ಶಿವರುದ್ರಪ್ಪನವರು ಹೇಳಿದ್ದಾರೆ ?

79. ನಾವು ಏನನ್ನು ಕೆಡವಿ ಸೇತುವೆಯಾಗಬೇಕು ಎಂದು ಕವಿ ಹೇಳಿದ್ದಾರೆ ?

80. ಹಲಗಲಿ ಬೇಡರು ಲಾವಣಿಯ ಅಂಕಿತ ಯಾವುದು ?

81. ಕೃಷ್ಣನ ಪಕ್ಕದಲ್ಲಿ ಕುಳಿತುಕೊಳ್ಳಲು ಕರ್ಣನು ಅಂಜಿದನು ಏಕೆ ?

82. ಕರ್ಣನ ಚಿತ್ತಗ್ಲಾನಿಗೆ ಕಾರಣವೇನು ?

83. ಕರ್ಣನು ನಾಳಿನ ಭಾರತವು ಯಾರಿಗೆ ಔತಣವಾಯಿತೆಂದಿದ್ದಾನೆ ?

84. ಕವಿ ಕುವೆಂಪುರವರ ಕಲ್ಪನೆಯಲ್ಲಿ ಸಂಜೆಯ ಬಿಸಿಲೂ ಏನಾಗಿದೆ ?

85. ಶರಶಯ್ಯೆಯಲ್ಲಿ ಮಲಗಿದ್ದವರು ಯಾರು ?

86. ದುರ್ಯೋಧನನು ಯಾರನ್ನು ಕೊಲಿಸಿದ ನೆಲದೊಡನೆ ಬಾಳುವುದಿಲ್ಲ ಎಂದಿದ್ದಾನೆ ?

87. ಕುದುರೆಯನ್ನು ಲವನು ಯಾವುದಕ್ಕೆ ಕಟ್ಟಿದನು ?

88. ರಾಮನ ಯಜ್ಞಾಶ್ವವು ಉಪವನಕ್ಕೆ ಏಕೆ ಪ್ರವೇಶಿಸಿತು ?

89. ಪರಶುರಾಮನು ಒಡವೆಯನ್ನು ಯಾರಿಗೆ ನೀಡೆದೆನೆಂದು ಹೇಳುತ್ತಾನೆ ?

90. ದ್ರೋಣರು ಪರಶುರಾಮನಲ್ಲಿ ದಿವ್ಯಾಸ್ತ್ರಗಳನ್ನೆ ಏಕೆ ಬೇಡಿದರು ?

91. ಸಮುದ್ರ ಮಥನದಲ್ಲಿ ಸಿರಿಯು ಯಾರ ಜೊತೆಯಲ್ಲಿ ಹುಟ್ಟಿದೆಯೆಂದು ದ್ರೋಣನು ಹೇಳುತ್ತಾನೆ

92. ವಿವೇಕಾನಂದರ ಧರ್ಮತತ್ವವೆಂದರೆ ಏನು?

93. ಕುವೆಂಪುರವರು ವಿವೇಕಾನಂದರನ್ನು ಏನೆಂದು ಕರೆದಿದ್ದಾರೆ ?

94. ಬಾಲರವಿಯು ಎಲ್ಲಿ ಥಳಿಥಳಿಸುತ್ತಿದ್ದಾನೆ ?

95. ಬಾಲರವಿ ಎಲ್ಲಿ ಸೊರಗಿದ್ದಾನೆ ?

96. ಪುಟ್ಟ ಪೋರಿಯ ಗುಡಿಸಲೊಳಗೆ ಬರಲು ವಂಸಂತನಿಗೆ ಏಕೆ ಹೆದರಿಕೆ ?

97. ಬಾಲಕ ಭಗತ್‌ಸಿಂಗ್ ಜಲಿಯನ್ ವಾಲಾಬಾಗ್‌ಗೆ ಏಕೆ ಹೋಗಿದ್ದನು ?

98. ಜಲಿಯನ್ ವಾಲಾಬಾಗಿನ ರಕ್ತಸಿಕ್ತ ಮಣ್ಣನ್ನು ಭಗತ್‌ಸಿಂಗ್ ಹೇಗೆ ಕಾಪಾಡಿದ್ದನು ?

99. ವರ್ತಕನು ನಗರವನ್ನು ಬಿಟ್ಟು ಹಳ್ಳಿಗೆ ಹೋಗಲು ನಿರ್ಧರಿಸಿದ್ದೇಕೆ ?

100. ಮೃಗದ ಶಾಪವಿಮೋಚನೆಗೆ ಕಾರಣರು ಯಾರು ?

101. ಉಳುವವನನ್ನು ಕಂಡು ನಗುವುದು ಯಾರು ?

102. ಬಾಯಲ್ಲಿ ತಿಂದು ಬಗಲಲ್ಲಿ ಕಕ್ಕುವುದು ಯಾವುದು ?

103. ನೀರಲ್ಲೆ ಹುಟ್ಟಿ, ನೀರು ತಾಕಿದರೆ ಮಟಮಾಯಾವಾಗುವುದು ಏನು ?

II. <u>ಈ ಕೆಳಗಿನ ಪ್ರಶ್ನೆಗಳಿಗೆ ಮೂರು- ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ :</u>

1. ಮಹಿಳೆಯ ಆರ್ತನಾದ ಕೇಳಿದ ರಾಹಿಲನ ಮನದಲ್ಲಿ ಮೂಡಿದ ಪ್ರಶ್ನೆಗಳು ಯಾವುವು ?

2. ನಿರ್ಜೀವವಾಗಿರುವ ಮಗುವನ್ನು ನೋಡಿ ಮುದುಕಿ ನಿರಾಶೆಯಿಂದ ಹೇಳಿದ್ದೇನು ?

3. ಲಂಡನ್ನಿನ ಹೆಣ್ಣು ಮಕ್ಕಳು ಯಾವಯಾವಕೆಲಸದಲ್ಲಿ ನಿಯುಕ್ತರಾಗಿರುತ್ತಾರೆ ?
4. ವೂಲವರ್ಥ ಅಂಗಡಿಯಲ್ಲಿ ಸಿಗುವ ವಸ್ತುಗಳು ಯಾವುವು ?
5. ಸಾಮ್ರಾಟರ ರಾಜ್ಯಾಭಿಷೇಕವಾಗುವ ಸಿಂಹಾಸನದ ಮೇಲಿರುವ ಕಲ್ಲುಪಾಟಿಯ ವಿಶೇಷತೆಯೇನು ?
6. ಗೋಕಾಕರು 'ಪ್ರವಾಸವು ಶಿಕ್ಷಣದ ಒಂದು ಭಾಗವಾಗಿದೆ' ಎಂದು ಬೇಕನ್ನಿನ ಮಾತುಗಳನ್ನು ನೆನಪಿಸಿಕೊಳ್ಳಲು ಕಾರಣವೇನು ?
7. ಅಶೋಕ ಪೈ ಹೇಳಿದ ಸಂಶೋಧನಾ ಸತ್ಯವೇನು ?
8. ವಚನಕಾರರ ದೃಷ್ಟಿಯಲ್ಲಿ ಅರಿವು ಎಂದರೇನು ?
9. ವಚನಕಾರರಲ್ಲಿ ಕಂಡುಬಂದ ಪ್ರಜ್ಞೆಯ ಭಾವನೆಗಳು ಯಾವುವು ?
10. ಮದಲಿಂಗನ ಕಣಿವೆಯಲ್ಲಿ ಬರುವಾಗ ಶಾನುಭೋಗರು ಏನೆಂದು ಯೋಚಿಸಿದರು ?
11. ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣವೇನು ?
12. ಶಾನುಭೋಗರು ಮೂರ್ಛೆಯಲ್ಲಿದ್ದಾಗ ನಡೆದ ಘಟನೆಯನ್ನು ತಿಳಿಸಿ.
13. ಧರ್ಮಬುದ್ಧಿಗೆ ದುಷ್ಟಬುದ್ಧಿಯು ಯಾವ ಸಲಹೆಯಿತ್ತನು ?.
14. ಧರ್ಮಾಧಿಕರಣರು ವಟವೃಕ್ಷಕ್ಕೆ ಏನು ಹೇಳಿದರು ?
16. ಸುಕುಮಾರಸ್ವಾಮಿಯು ಹೇಗೆ ಸುಖಭೋಗಗಳನ್ನು ಅನುಭವಿಸುತ್ತಿದ್ದನು ?
17. ವೃಷಭಾಂಕನು ಸುಕುಮಾರಸ್ವಾಮಿಗೆ ವ್ಯಾಧಿಯಿದೆ ಎಂದುಕೊಳ್ಳಲು ಕಾರಣವೇನು ?
18. ಹಲಗಲಿಯ ಬೇಡರು ದಂಗೆ ಏಳಲು ಕಾರಣವೇನು ?
19. ಲಾವಣಿಗಳನ್ನು ಏಕೆ ವೀರ ಗೀತೆಗಳು ಎನ್ನಲಾಗಿದೆ ?
20. ಹಲಗಲಿಗೆ ದಂಡು ಬರಲು ಕಾರಣವೇನು ?
21. ಕವಿಗೆ ಯಾವ್ಯಾವುದರಲ್ಲಿ ಆಗಸದಿಂದ ಬಿಸಿಲವರೆಗೂ ಹಸುರು ಕಾಣುತ್ತದೆ ?
22. ಕವಿಯಾತ್ಮವು ಹಸುರುಗಟ್ಟಲು ಕಾರಣವಾದ ಹಿನ್ನೆಲೆಯ ಅಂಶಗಳೇನು ?
23. ವಾಲ್ಮೀಕಿ ಆಶ್ರಮಕ್ಕೆ ಯಜ್ಞಾಶ್ವವು ಬಂದ ಬಗೆಯನ್ನು ವಿವರಿಸಿ.
24. ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ ಏನೆಂದು ಬರೆಯಲಾಗಿತ್ತು ?
25. ಪರಶುರಾಮನು ಮಣ್ಣಿನ ಪಾತ್ರೆಯಲ್ಲಿ ಅರ್ಘ್ಯವನ್ನು ಕೊಡಲು ಕಾರಣವೇನು ?
26. ದ್ರುಪದನ ವರ್ತನೆಯಿಂದ ನೊಂದ ದ್ರೋಣನು ಏನು ಶಪಥ ಮಾಡಿದನು ?
27. ದ್ರುಪದನು ದ್ರೋಣರಿಗೆ ಹೇಳಿದ ಮಾತುಗಳು ಯಾವುವು ?
28. ವಿವೇಕಾನಂದರು ಚಿಕಾಗೋ ಸರ್ವಧರ್ಮ ಸಮ್ಮೇಳನದಲ್ಲಿ ಹೇಳಿದ್ದೇನು ?
29. ಜಾತಿ ವ್ಯವಸ್ಥೆಯ ಬಗ್ಗೆ ವಿವೇಕಾನಂದರ ಅಭಿಪ್ರಾಯವೇನು ?
30. ವಿವೇಕಾನಂದರು ಕೋಮುವಾದದ ಕಟ್ಟಾ ವಿರೋಧಿಯಾಗಿದ್ದರು ಏಕೆ ?

31. ಜಲಿಯನ್ ವಾಲಾಬಾಗ್ ನಲ್ಲಿರುವ ಒಕ್ಕಣೆ ಏನು ?

32. ಭಗತ್ ಸಿಂಗ್ ನಸಹೋದರಿಗೆ ಆತನ ಉಪವಾಸದ ಕಾರಣಗಳು ಹೇಗೆ ತಿಳಿದು ಬಂದವು ?

33. ಬಡತನ ಸುಂದರಿ ಹಾಗೂ ಅವಳ ತಂದೆಗೆ ಕಷ್ಟವಾಗಲಿಲ್ಲ ಏಕೆ ?

34. ಮೃಗದ ಬಾಹ್ಯ ಆಕಾರ ಹೇಗಿತ್ತು ?

35. ಮೃಗದ ಬಗೆಗೆ ಸುಂದರಿಯ ಮನಸ್ಸು ಏಕೆ ಕರುಗುತ್ತಿತ್ತು ?

36. ಕನ್ಯೆ ಕೊಟ್ಟ ಶಾಪವೇನು ?

37. 'ಅಂಗಿ'ಯ ಬಗೆಗೆ ಇರುವ ಒಗಟನ್ನು ಬರೆಯಿರಿ .

38. ಉಪ್ಪಿನ ವಿಶೇಷತೆ ಒಗಟಿನಲ್ಲಿ ಹೇಗೆ ವ್ಯಕ್ತವಾಗಿದೆ ?

39. 'ಉತ್ತರಾಣಿ ಗಿಡ' ಎಂಬ ಉತ್ತರ ಬರಲು ಹೇಳಿದ ಒಗಟು ಯಾವುದು ?

40. 'ಬೀಸುಕಲ್ಲು' ಅರ್ಥ ಬರುವ ಬೆಡಗಿನ ಪ್ರಶ್ನೆಯನ್ನು ತಿಳಿಸಿ.

41. ಒಗಟುಗಳಿಂದ ಶೈಕ್ಷಣಿಕವಾಗಿ ಏನು ಲಾಭ ?

42. ಮುದುಕಿಗೆ ಯುದ್ಧದ ಬಗ್ಗೆ ತಿರಸ್ಕಾರ ಮೂಡಲು ಕಾರಣವೇನು ?

43. ಶಬರಿಯ ಸತ್ಕಾರ ಕಂಡು ರಾಮನು ಮೆಚ್ಚಿದ ನುಡಿದ ಮಾತುಗಳೇನು ?

44. ಸೀತೆಯನ್ನು ಕಾಣದೇ ಶ್ರೀರಾಮ ಹೇಗೆ ದುಃಖಿಸಿದ್ದಾನೆ ?

45. ಲಂಡನ್ ನಗರದಲ್ಲಿ ಸುಗಮ ಸಂಚಾರಕ್ಕೆ ಮಾಡಿರುವ ವ್ಯವಸ್ಥೆ ಹೇಗಿದೆ ?

46. ಹೆಣ್ಣು ಮಕ್ಕಳನ್ನು ಅತ್ಯಾದರದಿಂದ ನಡೆಸಿಕೊಳ್ಳುವ ಸಂಸ್ಕೃತಿ ಇಂಗ್ಲೆಂಡಿನಲ್ಲಿ ಕಾಣಬೇಕೆಂಬುದು ಆಂಗ್ಲರ ಮತ ಏಕೆ ? ವಿವರಿಸಿ.

47. 'ದೇಶ ಸುತ್ತಬೇಕು' ಎನ್ನುವುದನ್ನು ವಿ.ಕೃ.ಗೋಕಾಕ್ ರವರು ಹೇಗೆ ಸಮರ್ಥಿಸಿದ್ದಾರೆ?

48. ನಾಲ್ವಡಿ ಕೃಷ್ಣರಾಜ ಒಡೆಯರು "ಸಾಮಾಜಿಕ ಕಾನೂನುಗಳ ಹರಿಕಾರ "ಎನಿಸಿಕೊಳ್ಳಲು ಕಾರಣಗಳೇನು ?

49. ಪ್ರಜ್ಞೆಯನ್ನೇ ದೇವರು ಎಂದುಕೊಂಡ ವಚನಕಾರರ ನುಡಿಯೇ ಕಾವ್ಯವಾಯಿತು ಹೇಗೆ ?

50. 'ಶಾನುಭೋಗರು ತಾವು ಉಳಿದದ್ದು ಖಿರ್ದಿ ಪುಸ್ತಕದಿಂದ' ಎಂದು ತಿಳಿಯಲು ಕಾರಣಗಳೇನು

51. ಹುಲಿಯ ಮನಸ್ಸಿನಲ್ಲಿ ಉಂಟಾದ ಗೊಂದಲವೇನು ?

52. ಸತ್ಯಾಂಶವನ್ನು ಧರ್ಮಾಧಿಕರಣರಿಗೆ ತಿಳಿಯುವಂತೆ ಮಾಡಲು ಧರ್ಮಬುದ್ಧಿ ಮಾಡಿದ ಉಪಾಯವೇನು ?

53. ವೃಕ್ಷವು ಸಾಕ್ಷಿ ನುಡಿದದ್ದು ಮೋಸವೆಂದು ಧರ್ಮಬುದ್ಧಿ ತಿಳಿಯಲು ಕಾರಣವಾಗುವ ಅಂಶಗಳಾವುವು ?

54. ವೃಷಬಾಂಕ ರಾಜನ ಸ್ವಾಗತಕ್ಕಾಗಿ ಯಶೋಭದ್ರೆ ಯಾವ-ಯಾವ ಸಿದ್ಧತೆ ಮಾಡಿದ್ದಳು ?

55. ನಾವು ಮುಂಗಾರಿನ ಮಳೆಯಾಗೋ ಹಾಗೂ ವಸಂತವಾಗಬೇಕೆಂದು ಕವಿ ಜಿ.ಎಸ್.ಶಿವರುದ್ರಪ್ಪನವರು ಹೇಳಿದ್ದಾರೆ ?

56. ಕಾಲವೆಂಬ ಹಕ್ಕಿಯ ಹಾರಾಟ ಹೇಗಿದೆ ತಿಳಿಸಿ.

57. ಹಲಗಲಿ ದಂಗೆಯ ಪರಿಣಾಮವೇನು ?

58. ಯುದ್ಧದ ವಿಚಾರದಲ್ಲಿ ಕರ್ಣನ ತೀರ್ಮಾನವೇನು ?

59. ಕವಿ ಕುವೆಂಪುರವರ ಆತ್ಮ ರಸಪಾನ ಸ್ನಾನ ಹೇಗಾಯಿತು ?

60. ಕವಿಯು ಬೇರೆ ಬಣ್ಣವನೆ ಕಾಣೆ ಎನ್ನಲು ಕಾರಣವೇನು ?

61. ದುರ್ಯೋಧನನು ತಾನು ಯಾವಾಗ ಸಂಧಿ ಮಾಡಿಕೊಳ್ಳಬಹುದೆಂದು ಹೇಳಿದನು ?

62. ದುರ್ಯೋಧನನು ಹೋರಾಟಕ್ಕೆ ಕಾರಣಗಳೇನು ?

63. ಪಟ್ಟದ ಲಿಖಿತ ಓದಿ ಲವ ಕೋಪಗೊಳ್ಳಲು ಕಾರಣವೇನು ?

64. ಹೂದೋಟಕ್ಕೆ ಬಂದ ಕುದುರೆ ಕಂಡ ಲವ ಅದರ ಬಳಿ ಬಂದನೇಕೆ ? ತಿಳಿಸಿ.

65. ಮನುಷ್ಯರಾದವರು ನಾಚಿಕೆಗೆಟ್ಟುವರು' ಎಂದು ದ್ರುಪದನು ಗರ್ವದಿಂದ ನುಡಿಯಲು ಕಾರಣಗಳೇನು

66. ಐಶ್ವರ್ಯವು ಬಂದಾಗ ಹೇಗೆ ಬದಲಾಗುತ್ತಾರೆಂದು ದ್ರೋಣನು ಹೇಳುತ್ತಾನೆ ?

67. ವಿವೇಕಾನಂದರು ಇಂದಿಗೂ ಸತ್ಯ ಎಂಬುದನ್ನು ಸೃಷ್ಟಿಕರಿಸಿ:

68. ಬಡವರು, ಶ್ರಮಿಕರ ಪಾಲಿಗೆ ವಸಂತ ಮುಖ ತೋರಲಿಲ್ಲ ಎಂಬ ಭಾವನೆ ಪುಟ್ಟಿಗೆ ಮೂಡಲು ಕಾರಣಗಳೇನು ?

69. ಭಗತ್‌ಸಿಂಗ್ ಸಹೋದರರಿಗೆ ಆತನ ಉಪವಾಸದ ಕಾರಣಗಳು ಹೇಗೆ ತಿಳಿದವೂ ?

70. ವರ್ತಕ ಹಳ್ಳಿಯ ಕಡೆ ಹೊರಡಲು ತೀರ್ಮಾನಿಸಿದ್ದೇಕೆ ?

71. ದೇವತೆಯೊಬ್ಬಳ ಶಾಪದ ಸಾರಾಂಶವೇನು ?

72. 'ಉಳುವಾನೆ ಕಂಡು ನಗುವುದು' ಎಂಬ ಒಗಟನ್ನು ವಿಶ್ಲೇಷಿಸಿ.

73. ಬೀಸುಕಲ್ಲು ಎಂಬ ಅರ್ಥವನ್ನು ಕೊಡುವ ಒಗಟನ್ನು ಬರೆಯಿ.

<u>III. ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ :</u>

1. "ದಯವಿಟ್ಟು ಬಾಗಿಲು ತೆಗೆಯಿರಿ ನಾನು ಗಾಯಗೊಂಡಿದ್ದೇನೆ"

2. "ನನ್ನ ಮಗನ ಕಣ್ಣುಗಳಂತೆ ಇವೆಯಲ್ಲ"

3. "ಆವುದೀ ಮರುಳು ? ನಮ್ಮೆಡೆಗೆ ಬರುತಿಹುದು"

4. "ರೂಪಿನಂತೆ ಮಾತು ಕೂಡ ಎನಿತುದಾರವಾಗಿದೆ"

5. "ಬೆಳಕಿಗೊಲಿದವರ್ ಉರಿವ ಬತ್ತಿಯ ಕರುಕ ಕಾಣರು"

6. "ಪ್ರವಾಸವು ಶಿಕ್ಷಣದ ಒಂದು ಭಾಗವಾಗಿದೆ"

7. "ಹೊತ್ತು! ಹೊತ್ತು! ಹೊತ್ತೇ ಹಣ"
8. "ನಿಮ್ಮ ದೇಶದ ಗೌರವವನ್ನು ಕಾಯಿರಿ ಇದು ದೊಡ್ಡದಾದ ರಾಷ್ಟ್ರ"
9. "ಸಾಮಾಜಿಕ ಕಾನೂನುಗಳ ಹರಿಕಾರ"
10. "ಆದರ್ಶ ಪುರುಷರೊಬ್ಬರು ದಿವಾನರಾದದ್ದು ಮೈಸೂರು ಸಂಸ್ಥಾನದ ಪುಣ್ಯ ವಿಶೇಷವೇ ಸರಿ"
11. ಅವರ ಸಾಧನೆಯ ಕಿರೀಟಕ್ಕೆ ಮತ್ತೊಂದು ಗರಿಯನ್ನು ಸೇರಿಸಿತು"
12. "ಹಾಗಾದರೆ ಎಲ್ಲರಿಗೂ ಮನೆ ಆಗುವವರೆಗೂ ನನಗೂ ಮನೆ ಬೇಡ"
13. "ನಾವು ಮನುಷ್ಯರು"
14. "ಯಾವ ಜೀವಿಯೂ ತನ್ನಷ್ಟಕ್ಕೆ ತಾನಿಲ್ಲ"
15. "ಸ್ವಧರ್ಮೇ ನಿಧನಂ ಶ್ರೇಯ:"
16. "ನಾನು ಮುಖ ಮೇಲಾಗಿ ಬಿದ್ದಿದ್ದೆನೇ"
17. "ದೇವರೇ ಮರ ಹತ್ತುವಷ್ಟು ಅವಕಾಶ ಕರುಣಿಸು"
18. "ತಸ್ಜರಸ್ಯಾನೃತಂ ಬಲಂ"
19. "ಪ್ರಕೃತಿ ವಿಕೃತಿಯಾದ ಮನುಷ್ಯನಾಯುಷ್ಯಂ ಕುಂದುಗುಂ"
20. "ನಿನ್ನ ಪಳುವಗೆ ನಮ್ಮ ಕುಲಮನೆಲ್ಲಮನಳಿವ ಬಗೆ"
21. "ಅವಂತಿ ಸುಕುಮಾರನೆಂದು ಪೆಸರನಿಟ್ಟಂ"
22. "ರಿಸಿಯರ ರೂಪಂ ಕಾಣ್ಗುಮಂದೀತನಂ ತಪಂಬಡುಗುಮ್"
23. "ಪ್ರೀತಿಯ ಹಣತೆಯ ಹಚ್ಚೋಣ"
24. "ಹೊಸ ಭರವಸೆಗಳ ಕಟ್ಟೋಣ"
25. "ಸಾರ್ವಭೌಮರಾ ನೆತ್ತಿಯ ಕುಕ್ಕಿ"
26. "ಮಂಗಳ ಲೋಕದ ಅಂಗಳಕೇರಿ"
27. "ಬಲ್ಲರು ಯಾರಾ ಹಾಕಿದ ಹೊಂಚ"
28. "ಎಲ್ಲ ಜನರಿಗೆ ಜೋರ ಮಾಡಿ ಕಸಿದುಕೊಳ್ಳಿರಿ ಹತಾರ"
29. "ಜೀವ ಸತ್ತು ಹೋಗುವುದು ಗೊತ್ತ"
30. "ಮಾರಿಗೌತಣವಾಯ್ತು ನಾಳಿನ ಭಾರತವು"
31. ರವಿಸುತನ ಕಿವಿಯಲಿ ಬಿತ್ತಿದನು ಭಯವ"
32. "ನಿನ್ನಪದೆಸೆಯ ಬಯಸುವನಲ್ಲ"
33. "ಹಸುರಾದುದು ಕವಿಯಾತ್ಮಂ"
34. "ಬೇರೆ ಬಣ್ಣವನೆ ಕಾಣೆ"

35. ”ಹಸುರತ್ತಲ್ ಹಸುರಿತ್ತಲ್ ಹಸುರೆತ್ತಲ್”
36. ”ನೆಲಕಿರಿವೆನೆಂದು ಬಗೆದಿರೆ ಚಲಕಿರಿವೆಂ”
37. ”ಮೇಣಾಯ್ತು ಕೌರವನಿಂಗವನೀತಳಂ”
38. ”ತನ್ನ ಮಾತೆಯಂ ಸರ್ವಜನಮುಮಂ ಬಂಜೆಯೆನ್ನದಿರ್ದಪುದೆ”
39. ”ಅರಸುಗಳ ವಾಜಿಯಂ ಬಿಡು”
40. ”ಜಾನಕಿಯ ಮಗನಿದಕೆ ಬೆದರುವನೆ”
41. ”ಈಗಳೊಂದಡಕೆಯುಮಿಲ್ಲ ಕೈಯೊಳ್”
42. ”ವಿದ್ಯಾಧನಮೇ ಧನಮಪ್ಪುದು”
43. ”ಎಂತು ನಾಣಿಲಿಗರಪ್ಪರೆ ಮಾನಸರ್”
44. “ದೇಹಕ್ಕೂ ಮನಸ್ಸಿಗೂ ಗಾಯ ಮಾಡುವುದೇ ಯುದ್ಧದ ಪರಿ ತಾನೇ
45. “ನೀನೊರಿದೊಪ್ಪಲು ದಿವ ತಪ್ಪದಲಾ “
46. “ಮನೆ ಇಡಿದು ಇರುವ ತರುನ ಬುದ್ಧಿ ಮನೆಯ ಮಟ್ಟದ್ದೇ”
47. “ಕೈಗಾರಿಕೀಕರಣ ಇಲ್ಲವೆ ಅವನತಿ”
48. “ಏನ್ರಯ್ಯಾ ಏನ್ ಮಾಡ್ತಾ ಇದ್ದೀರಿ”
49. “ಮಡಿಯ ಬೇಕಾದರೆ ಮಾಡಿಯೇ ಮಡಿಯತ್ತೇನೆ”
50. “ನಿನ್ನಂ ಸಾಕ್ಷಿಮಾಡಿ ಕೇಳ್ದಪೆವು”
51. “ ನಾಳಿನ ಕನಸನು ಬಿತ್ತೋಣ”
52. “ಹೊಸಗಾಲದ ಹಸು ಮಕ್ಕಳ ಹರಸಿ”
53. “ಮೋಸ ಮಾಡಿ ನಮ್ಮ ದೇಶ ಗೆದಿತಾರೊ”
54. “ಬಾಯ್ದಂಬುಲಕೆ ಕೈಯಾನುವರೆ”
55. “ಸಮರದೊಳನಗಜ್ಜ ಪೇವಿಮಾವುದು ಕಜ್ಜಂ”
56. “ನೊಳವಿಂಗೆ ಕುಪ್ಪೆ ವರಂ”

<u>IV.ಈ ಸಾಹಿತಿ/ಕವಿಗಳ ಸ್ಥಳ,ಕಾಲ, ಕೃತಿ, ಪ್ರಶಸ್ತಿ/ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ:</u>

ಸೂಚನೆ: ಪರೀಕ್ಷೆಯಲ್ಲಿ ಒಬ್ಬ ಲೇಖಕ ಮತ್ತು ಒಬ್ಬ ಕವಿಯ ಪರಿಚಯವನ್ನು ಮಾಡಿಕೊಡಬೇಕು.

ಮಾದರಿಗಾಗಿ ಒಬ್ಬರ ಪರಿಚಯವನ್ನು ಮಾಡಲಾಗಿದೆ.

ದ.ರಾ.ಬೇಂದ್ರೆ:- ಅಂಬಿಕಾತನಯದತ್ತ ಎಂಬ ಕಾವ್ಯನಾಮದಿಂದ ಪರಿಚಿತರಾಗಿರುವ ದ.ರಾ.ಬೇಂದ್ರೆಯವರು ಕ್ರಿ.ಶ.1896ರಲ್ಲಿ ಧಾರವಾಡದಲ್ಲಿ ಜನಿಸಿದರು. ಇವರ ಕೃತಿಗಳೆಂದರೆ ಗರಿ, ನಾಕುತಂತಿ, ಸಖೀಗೀತೆ,

ನಾದಲೀಲೆ ಇತ್ಯಾದಿಗಳು. ಇವರಿಗೆ ಪಂಪ ಪ್ರಶಸ್ತಿ ಹಾಗೂ ಜ್ಞಾನಪೀಠ ಪ್ರಶಸ್ತಿಗಳು ಲಭಿಸಿವೆ. ಬೇಂದ್ರೆಯವರನ್ನು ಶಬ್ಧಗಾರುಡಿಗ ಎಂಬುದಾಗಿ ಕರೆಯುತ್ತಾರೆ.

ಲೇಖಕರ ಪರಿಚಯ

ಕ್ರ. ಸಂ.	ಗದ್ಯದ ಹೆಸರು	ಲೇಖಕರ ಹೆಸರು	ಕಾಲ	ಸ್ಥಳ	ಆಕರ ಕೃತಿ ಮತ್ತು ಇತರೆ ಕೃತಿಗಳು	ಪ್ರಶಸ್ತಿ/ಬಿರುದುಗಳು
1	ಯುದ್ಧ	ಸಾ.ರಾ.ಅಬೂಬಕ್ಕರ್	1936	ಕಾಸರಗೋಡು	ಚಪ್ಪಲಿಗಳು,ಸಹನಾ, ಕದನ ವಿರಾಮ	ನೃಪತುಂಗ ಪ್ರಶಸ್ತಿ
2	ಶಬರಿ	ಪು.ತಿ.ನರಸಿಂಹಾಚಾರ್	1905	ಮೇಲುಕೋಟೆ ಮಂಡ್ಯ ಜಿಲ್ಲೆ	ಶ್ರೀರಂಗ ಮತ್ತು ನಾ.ಕಸ್ತೂರಿ ಸಂಪಾದಿಸಿರುವ ಏಕಾಂಕ ನಾಟಕಗಳು,ಅಹಲ್ಯೆ, ಶಬರಿ	ಪಂಪ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ
3	ಲಂಡನ್ ನಗರ	ವಿ.ಕೃ.ಗೋಕಾಕ್	1909	ಸವಣೂರು ಹಾವೇರಿ ಜಿಲ್ಲೆ	ಸಮುದ್ರದಾಚೆಯಿಂದ, ಭಾರತ ಸಿಂಧು ರಶ್ಮಿ	ಜ್ಞಾನಪೀಠ ಪ್ರಶಸ್ತಿ, ಪದ್ಮಶ್ರೀ ಪುರಸ್ಕಾರ
4	ಎದೆಗೆ ಬಿದ್ದ ಅಕ್ಷರ	ದೇವನೂರು ಮಹದೇವ	1949	ದೇವನೂರು ಮೈಸೂರು ಜಿಲ್ಲೆ	ಎದೆಗೆ ಬಿದ್ದ ಅಕ್ಷರ, ಒಡಲಾಳ, ಕುಸುಮಬಾಲೆ	ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ
5	ವ್ಯಾಘ್ರಗೀತೆ	ಎ.ಎನ್.ಮೂರ್ತಿರಾವ್	1900	ಅಕ್ಕಿ ಹೆಬ್ಬಾಳು ಮಂಡ್ಯ ಜಿಲ್ಲೆ	ಎ.ಎನ್.ಮೂರ್ತಿರಾವ್ ಅವರ ಸಮಗ್ರ ಲಲಿತ ಪ್ರಬಂಧಗಳು, ಹಗಲುಗನಸುಗಳು, ಚಿತ್ರಗಳು- ಪತ್ರಗಳು	ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ.ಪಂಪ ಪ್ರಶಸ್ತಿ

ಕವಿಗಳ ಪರಿಚಯ

ಕ್ರ.ಸಂ.	ಪದ್ಯದ ಹೆಸರು	ಕವಿಯ ಹೆಸರು	ಕಾಲ	ಸ್ಥಳ	ಆಕರ ಕೃತಿ ಮತ್ತು ಇತರೆ ಕೃತಿಗಳು	ಪ್ರಶಸ್ತಿ/ಬಿರುದುಗಳು
1	ಹಕ್ಕಿಹಾರುತಿದೆ ನೋಡಿದಿರಾ	ದ.ರಾ.ಬೇಂದ್ರೆ	1896	ಧಾರವಾಡ	ಗರಿ, ನಾಕುತಂತಿ, ಸಖೀಗೀತೆ, ನಾದಲೀಲೆ	ಜ್ಞಾನಪೀಠ ಪ್ರಶಸ್ತಿ, ಪಂಪ ಪ್ರಶಸ್ತಿ
2	ಕೌರವೇಂದ್ರನ ಕೊಂದೆ ನೀನು	ಕುಮಾರವ್ಯಾಸ /ಗದುಗಿನ ನಾರಾಣಪ್ಪ	1430	ಗದುಗಿನ ಕೋಳಿವಾಡ	ಕರ್ಣಾಟಕ ಭಾರತ ಕಥಾಮಂಜರಿ	ರೂಪಕ ಸಾಮ್ರಾಜ್ಯ ಚಕ್ರವರ್ತಿ
3	ಹಸುರು	ಕುವೆಂಪು(ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ)	1904	ಕುಪ್ಪಳಿ ಶಿವಮೊಗ್ಗ ಜಿಲ್ಲೆ	ಪಕ್ಷಿಕಾಶಿ, ಶ್ರೀರಾಮಾಯಣ ದರ್ಶನಂ, ಕೊಳಲು, ಪ್ರೇಮ ಕಾಶ್ಮೀರ	ಜ್ಞಾನಪೀಠ ಪ್ರಶಸ್ತಿ, ಪಂಪ ಪ್ರಶಸ್ತಿ, ಪದ್ಮವಿಭೂಷಣ
4	ಛಲಮನೆ ಮೆರೆವೆಂ	ರನ್ನ	949	ಮದುವೊಳಲು	ಸಾಹಸ ಭೀಮ ವಿಜಯಂ (ಗದಾಯುದ್ಧ) ಅಜಿತ ತೀರ್ಥಂಕರ ಪುರಾಣ ತಿಲಕಂ	ಕವಿಚಕ್ರವರ್ತಿ, ರತ್ನತ್ರಯರಲ್ಲಿ ಒಬ್ಬ
5	ವೀರಲವ	ಲಕ್ಷ್ಮೀಶ	1550	ದೇವನೂರು ಚಿಕ್ಕಮಗಳೂರು ಜಿಲ್ಲೆ	ಜೈಮಿನಿ ಭಾರತ	ಉಪಮಾ ಲೋಲ, ಕರ್ನಾಟಕ

						ಕವಿಚೂತವನ ಚೈತ್ರ
6	ಕೆಮ್ಮನೆ ಮೀಸೆವೊತ್ತನೆ	ಪಂಪ	902	ವಂಗಿಮಂಡಲದ ವೆಂಗಿಪಳು	ವಿಕ್ರಮಾರ್ಜುನ ವಿಜಯಂ(ಪಂಪ ಭಾರತ) ಆದಿಪುರಾಣ	ಕವಿತಾ ಗುಣಾರ್ಣವ,ರತ್ನತ್ರಯರಲ್ಲಿ ಒಬ್ಬ, ಆದಿಕವಿ
7	ಸಂಕಲ್ಪಗೀತೆ	ಜಿ ಎಸ್ ಶಿವರುದ್ರಪ್ಪ	1926	ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಈಸೂರು ಗ್ರಾಮ	ಸಾಮಾಗಾನ ಚೆಲುವು-ಒಲವು ದೇವಶಿಲ್ಪ ದೀಪದ ಹೆಜ್ಜೆ ಅನಾವರಣ	ರಾಷ್ಟ್ರಕವಿ ಬಿರುದು

V.<u>ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ:</u>

1. ಕಲುಷಿತವಾದೀ ----------

----------ಮುಟ್ಟೋಣ.

2.ನೀಲ ಮೇಘಮಂಡಲ ----------

ಹಕ್ಕಿ ಹಾರುತಿದೆ ನೋಡಿದಿರಾ?

3.ಮಾರಿಗೌತಣವಾಯ್ತು ನಾಳಿನ

ವೀರರೈವರ ನೋಯಿಸೆನು ರಾಜೀವಸಖನಾಣೆ.

4.ನೆಲಕಿರಿವೆನೆಂದು ----------

----------ಪುದುವಾಲ್ದಪನೇ.

5. ಕೊಡಲಿ_____
_____
_____
_____ನಾನೆಪ್ಪಾ

6. ಹಸುರಾಗಸ_____
_____
_____
_____ಬಿಸಿಲೂ!

7. ಉರ್ವಿಯೊಳ್_____
_____
_____
_____ಲವನುರಿದೆದ್ದನು

8. ಅಂತೆಬನಾರ್ಗೆ_____
_____
_____
_____ನುಡಿದಂ

VI.ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥ ಮಾಡಿಕೊಂಡು ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ:

1. ಬೆಳ್ಳಿಯ ಹಳ್ಳಿಯ ಮೇರೆಯ ಮೀರಿ
   ತಿಂಗಳನೂರಿನ ನೀರನು ಹೀರಿ
   ಆಡಲು ಹಾಡಲು ತಾ ಹಾರಾಡಲು
   ಮಂಗಳ ಲೋಕದ ಅಂಗಳಕೇರಿ
   ಹಕ್ಕಿ ಹಾರುತಿದೆ ನೋಡಿದಿರಾ?

2. ಕಲುಷಿತವಾದೀ ನದೀಜಲಗಳಿಗೆ
   ಮುಂಗಾರಿನ ಮಳೆಯಾಗೋಣ

ಬರಡಾಗಿರುವೀ ಕಾಡು ಮೇಡುಗಳ
ವಸಂತವಾಗುತ ಮುಟ್ಟೋಣ.

3. ಬಿದ್ದುದನ್ನು ಮೇಲೆಬ್ಬಿಸಿ ನಿಲ್ಲಿಸಿ
ಹೊಸ ಭರವಸೆಗಳ ಕಟ್ಟೋಣ
ಮನುಜರ ನಡುವಣ ಅಡ್ಡಗೋಡೆಗಳ
ಕೆಡುವುತ ಸೇತುವೆಯಾಗೋಣ.

4. ಮರುಳು ಮಾಧವ ಮಹಿಯ ರಾಜ್ಯದ
ಸಿರಿಗೆ ಸೋಲುವನಲ್ಲ ಕೌಂತೇ
ಯರು ಸುಯೋಧನರೆನಗೆ ಬೆಸೆಕೈವಲ್ಲಿ ಮನವಿಲ್ಲ
ಹೊರೆದ ದಾತಾರಂಗೆ ಹಗೆವರ
ಶಿರವನರಿದೊಪ್ಪಿಸುವೆನೆಂಬೀ
ಭರದೊಳಿರ್ದೆನು ಕೌರವೇಂದ್ರನ ಕೊಂದೆ ನೀನೆಂದ.

5. ಏನು ಹೇಳೈ ಕರ್ಣ ಚಿತ್ತ
ಗ್ಲಾನಿ ಯಾವುದು ಮನಕೆ ಕುಂತೀ
ಸೂನುಗಳ ಬೆಸೆಕೈಸಿಕೊಂಬುದು ಸೇರದೆ ನಿನಗೆ
ಹಾನಿಯಿಲ್ಲೆನ್ನಾಣೆ ನುಡಿ ನುಡಿ
ಮೌನವೇತಕೆ ಮರುಳುತನ ಬೇ
ಡಾನು ನಿನ್ನಪದೆಸೆಯ ಬಯಸುವನಲ್ಲ ಕೇಳೆಂದ.

6. ನಿಮಗೆ ಪೊಡೆಮಟ್ಟು ಪೋಪೀ
ಸಮಕಟ್ಟಿಂ ಬಂದೆನಹಿತರೊಳ್ ಸಂಧಿಯನೇಂ
ಸಮಕೊಳಿಸಲೆಂದು ಬಂದೆನೆ
ಸಮರದೊಳಗಜ್ಜ ಪೇಳಿಮಾವುದು ಕಜ್ಜಂ

7. ಅಂತೆಂಬನಾರ್ಗೆ ಪರಿದುಂ

ಭ್ರಾಂತು ದಲೇಂ ದ್ರೋಣನೆಂಬನೇಂ ಪಾರ್ವನೆ ಪೇ

ಳೆಂತೆನಗೆ ಕೆಳೆಯನೇ ನೂಂ

ಕಂತಪ್ಪನನರಿಯೆನೆಂದು ಸಭೆಯೊಳ್ ನುಡಿದಂ

8. ¹ PÀxÀÄÝvÀÛéZÀqÀÄ¸ÀgÀzÀÄ¤AvÀgÉZÉH j UÉPÉZÉ½îPÉZÉmÁÖ

§ÆÆ¢ ªÀÁqÁågÉZÉºÀ®UÀ¸ÀÄ ÄÖÀÄvÀÄõ½AiÀÄ¯ÉÀÄqÀÄÖ

PÁt zÉºÉZÉÃ¬ÄvÉZÉPÉÉ ÄÖÀ ÀÂ¹ ºÉÃ½zÉPÀÄqÀÄvÀÄÖ

PÀÄvÀõPÉZÉÃn PÀÉÃ±ÀÀzÀÄiÀÄ¢AzÀºÁr zÉÀuÁÚ£ÀÄPÁ

9. £À¹ÀgÁwÀÄvÀÄ£À¹ÀzsÁwÀÄvÀÄ

F ±Á¹ÀÄ® ¹ÀÄ¢¢¢ÀiÀÄ

ºÀ¸ÀÄgÁzÀÄzÉZÉPÀ¤AiÀÁvÀÄ

ರಸಪಾನ ಸ್ನಾನದಲಿ

10. ºÀ¸ÀÄgÀvÀÛÉºÀ¸ÀÄ¸vÀÛ !

ºÀ¸ÀÄgÉvÀÛ PÀqÀ £À

ºÀ¸ÀÄgÀnÖÉZÉPÀ¤AiÀÁvÀÄ

ºÀ¸ÀÄg £ÉvÀÛ MqÀ £À !

11. PÁzÀ¢gÉÀÁ¥ÁAqÀÀ

gÁzÀg ªÉÃt Â¢£ÉZÉzÉ¸À¹ÀgÀzÉZÉÁAªÉÃ||

UÁzÉÀzÀÉzÉ¥ÁAqÀÀ

UÁðzÀÄzÀÄªÉÃuÁAiÀÄÛÉgÀÀUÀÀ¤vÀÄ||

12. J vÀÎJ vÀÄgÀÄ UÀ« ÄzÀÄ ¥ÉÆÃ¥ÀÄ ¥ÀÄÆzÉÆÃ ªÀÄÁ|

vÉÆÃ¥ÀÄ ¥ÀÄ½zÀÄzÀÄ ªÀÁ° ãÀÄ ªÀÄÄ¤£ÁxÀÄÆÃ|

¥ÉÆÃ¥ÀÄ ªÀÄgÉÆÃÄzÉÆÃUÉ£ÉÆÃ« Ä ¥ÉÆÃzÀÄ©ÃÄ PÀÄÉÀÁV||

ªÀÄÄ¥ÉÆÃgÀÄ £À¯ÉÆÃPÀ¢ A § AzÀÄ ªÀÄÄ½zÀÄÄÉ

£ÀÄÄ¸À° ÀÄiÀÄzÉqÉÆÃUÉ£ÀqÉ¥ÀÄzÀÄ £ÉÆÃqÀ®¥ÀqÀ

£É¥ÀÄÉÆÃ¼ ªÉÄgÉÆÃ¥À ¥À ÄÀ° T vÀÄÄ PÀqÀÄ®ªÀÄÉÆÃ¢ PÉÆÃ¼ÀÄwzÀÄ£ÀÄ

13. R¼ÀÄÉÆÃ« AUÉPÀÄ¥ÉÆÃgÀÄÉÆÃ§ªÉÄ¯ÁA§gÀÄÄÄmÉ¤£ÀÄzÉÆÃ|

zÀÄÉÆqÀÄÉÆÃ¢ zÉÆÃzÀÄ¨ÉqÁVAUÉPÉÆÃ®¯ÉÆÃUÀ¢ Ã¸ÀÄá||

ªÀÄiÀÄzÉÆÃ½ÉÆÃ« ¹ zÀ¤£ÀÄÁPÀÄÄÉÆÃZÀ¸ÀÄÖA

vÀÄÄÀÄUÉPÀn ÇÄzÉªÀÁuÉÆÃqÉPÉÄÄ« ÄÄ¸É¤ÉÇvÉÆÃ||

VII.ಈ ಕೆಳಗಿನ ಪ್ರಶ್ನೆಗಳಿಗೆ ಎಂಟು- ಹತ್ತು ವಾಕ್ಯಗಳಲ್ಲಿ ಉತ್ತರಿಸಿ:-

1.ಶಬರಿಯ ಚಿಂತೆ ಹಿಂಗಿ ಹೋದ ಬಗೆಯನ್ನು ನಿಮ್ಮ ಮಾತುಗಳಲ್ಲಿ ವಿವರಿಸಿ.

2.ನಂಬಿಕೆಟ್ಟವರಿಲ್ಲ ಎಂಬ ಮಾತು ಶಬರಿಯ ಮಾತು ಹೇಗೆ ನಿಜವಾಗಿದೆ ಎಂಬುದನ್ನು ಸಮರ್ಥಿಸಿ.

3.ನಾಲ್ವಡಿ ಕೃಷ್ಣರಾಜ ಒಡೆಯರಕಾಲದಲ್ಲಿ ಮೈಸೂರನ್ನು 'ಮಾದರಿ ಮೈಸೂರು ರಾಜ್ಯ' ವನ್ನಾಗಿ ಹೇಗೆ ರೂಪಿಸಿದರು?

4.ಶಿಕ್ಷಣಕ್ಷೇತ್ರಕ್ಕೆ ವಿಶ್ವೇಶ್ವರಯ್ಯನವರು ಸಲ್ಲಿಸಿದ ಕೊಡುಗೆಯೇನು ?

5.ವಿಶ್ವೇಶ್ವರಯ್ಯನವರು ಮೈಸೂರು ದಿವಾನರಾಗಿ ಸಲ್ಲಿಸಿದ ಸೇವೆಯನ್ನು ಕುರಿತು ಬರೆಯಿರಿ.

6.ನಾವು ಯಾವ ಸಂಕಲ್ಪ ಕೈಗೊಳ್ಳಬೇಕೆಂದು ಕವಿ ಶಿವರುದ್ರಪ್ಪನವರ ಆಶಯವಾಗಿದೆ.

7.ಸಂಕಲ್ಪ ಮತ್ತು ಅನುಷ್ಠಾನದ ಕುರಿತು ಕವಿ ಶಿವರುದ್ರಪ್ಪನವರ ಅಭಿಪ್ರಾಯವನ್ನು ವಿವರಿಸಿ.

8.ಹಕ್ಕಿಯನ್ನು ಕಾಲಗತಿಗೆ ಹೋಲಿಸುತ್ತಾ ಕವಿ ಬೇಂದ್ರೆಯವರು ಹೇ¼Äವ ಮಾತುಗಳಾವುವು?

9.'ಹಕ್ಕಿ ಹಾರುತಿದೆ ನೋಡಿದಿರಾ' ಎಂಬ ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ'

10.ಪಾಂಡವರು ಸೋದರರು ಎಂದು ತಿಳಿದಾಗ ಕರ್ಣನ ಮನಸ್ಥಿತಿಯನ್ನು ತಿಳಿಸಿ'

11.ಕರ್ಣನಿಗೆ ಶ್ರೀಕೃಷ್ಣನು ಒಡ್ಡಿದ ಆಮಿಷಗಳೇನು ?

12.ಕರ್ಣನ ನಿರ್ಧಾರ ಸರಿ ಎನ್ನುವಿರಾ ? ಹಾಗಾದರೆ ಸಮರ್ಥಿಸಿ'

13.ಭೀಷ್ಮ ಮತ್ತು ದುರ್ಯೋಧನರ ನಡುವಿನ ಸಂಭಾಷಣೆಯ ಸ್ವಾರಸ್ಯವನ್ನು ವಿವರಿಸಿ'

14.ದುರ್ಯೋಧನನ ಛಲದ ಗುಣ ಅವನ ಮಾತುಗಳಲ್ಲಿ ವ್ಯಕ್ತವಾಗಿರುವ ಬಗೆಯನ್ನು ವಿವರಿಸಿ'.

15.ಮುದುಕಿಯ ರೋಧನ ನಿರಾಶೆಗಳಿಗೆ ಯುದ್ಧ ಕಾರಣವಾಗಿದೆ. ಎಂಬುದನ್ನು ಸಮರ್ಥಿಸಿ:

16.ನಂಬಿ ಕೆಟ್ಟವರಿಲ್ಲ ಎಂಬ ಮತು ಶಬರಿಯ ಪಾಲಿಗೆ ನಿಜವಾಗಿದೆ ಎಂಬುದನ್ನು ವಿವರಿಸಿ.

17.ಲಂಡನ್ ನಗರದ ವೀಕ್ಷಣೆಯಲ್ಲಿ ಲೇಖಕರು ಗುರುತಿಸಿರುವ ವಿಶೇಷತೆಗಳೇನು ? ವಿವರಿಸಿ.

18.ವೆಸ್ಟ್ ಮಿನಿಸ್ಟರ್ ಅಬೆ ಪ್ರಾರ್ಥನಾ ಮಂದಿರ ಒಂದು ವಿಶೇಷ ಸ್ಮಾರಕ ವಿವರಿಸಿ.

19.ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರು ಸಂಸ್ಥಾನ ಆಡಳಿತ ವಿಕೇಂದ್ರಿಕರಣಕ್ಕೆ ಉತ್ತಮ ಆಡಿಪಾಯ ಹಾಕಿತು. ಎಂಬುದನ್ನು ಸಮರ್ಥಿಸಿ.

20.ವಿಶ್ವೇಶ್ವರಯ್ಯನವರು ಮೈಸೂರು ದಿವಾನರಾಗಿ ಸಲ್ಲಿಸಿದ ಸೇವೆಯನ್ನು ಕುರಿತು ಬರೆಯಿರಿ.

21.ಮಂಚಮ್ಮ ಮನೆ ಮಂಚಮ್ಮನಾದ ಕತೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

22.ವಚನಕಾರರಿಗೆ ಅವರವರ ಪ್ರಜ್ಞೆಯೇ ದೇವರಾಗಿತ್ತು" ಸಮರ್ಥಿಸಿ

23.ಶಾನುಭೋಗರನ್ನು ರಕ್ಷಿಸಿದುದು ಹುಲಿಯ ಧರ್ಮಶ್ರದ್ಧೆಯೇ ? ಖಿರ್ದಿ ಪುಸ್ತಕವೇ? ಸಮರ್ಥಿಸಿ.

24.ಸತ್ಯವು ಜಯವನ್ನು ತಂದುಕೊಡುತ್ತದೆ ಎಂಬುದನ್ನು ವೃಕ್ಷಸಾಕ್ಷಿ ಗದ್ಯಭಾಗದಿಂದ ಸಮರ್ಥಿಸಿ.

25.ದುಷ್ಟಬುದ್ಧಿಯ ತಂತ್ರ ಅವನಿಗೆ ತಿರುಗುಬಾಣವಾದ ಬಗೆಯನ್ನು ತಿಳಿಸಿ.

26.'ಸುಕುಮಾರ' ಎಂಬ ಹೆಸರು ಸುಕುಮಾರಸ್ವಾಮಿಗೆ ಹೇಗೆ ಅನ್ವರ್ಥವಾಗುತ್ತದೆ ? ವಿವರಿಸಿ.

27.ನಾವು ಯಾವ ಸಂಕಲ್ಪ ಕೈಗಳ್ಳಬೇಕೆಂಬುದು ಕವಿ ಶಿವರುದ್ರಪ್ಪ ನವರ ಆಶಯವಾಗಿದೆ ?

28.ಕವಿ ಅಂಬಿಕಾತನಯ ದತ್ತ ಕಾಲದ ಗತಿಯನ್ನು ಹಾರುವ ಹಕ್ಕಿಯೊಂದಿಗೆ ಸಮೀಕರಿಸಿ ಹೇಳಿರುವ ಮಾತುಗಳಾವುವು ? ವಿವರಿಸಿ.

29.ಲಾವಣಿಗಳು, ಕ್ರಾಂತಿಗೀತೆಗಳು ಎಂಬುದನ್ನು ಹಲಗಲಿ ಬೇಡರು ಪದ್ಯದ ಉದಾಹರಣೆಯೊಂದಿಗೆ ವಿವರಿಸಿ.

30.ಕೃಷ್ಣನು ಒಡ್ಡಿದ ಆಮಿಷಗಳಿಗೆ ಕರ್ಣನ ನಿರ್ಧಾರವೇನು ? ವಿವರಿಸಿ.

31.ಕುವೆಂಪುರವರ ಹಸುರು ಕವಿತೆಯ ಸಾರಾಂಶವನ್ನು ವಿವರಿಸಿ.

32.ದುರ್ಯೋಧನನ ಛಲದ ಗುಣ ಮತ್ತು ವ್ಯಕ್ತಿತ್ವವನ್ನು ಕುರಿತು ವಿವರಿಸಿ.

33.ಲವನು ಋಷ್ಯಾಶ್ರಮದಲ್ಲಿ ಬೆಳೆದರೂ ಅವನಲ್ಲಿ ಕ್ಷಾತ್ರಗುಣ ಸಹಜವಾಗಿತ್ತು ಎಂಬುದನ್ನು ನಿರೂಪಿಸಿ.

34.ದ್ರುಪದನಿಗೂ ದ್ರೋಣನಿಗೂ ನಡೆದ ಸಂಭಾಷಣೆಯನ್ನು ಸಂಕ್ಷಿಪ್ತವಾಗಿ ಬರೆಯಿರಿ?

35.ಯುದ್ಧದಿಂದ ಆಗುವ ಅನಾಹುತಗಳ ಬಗ್ಗೆ ನಿಮ್ಮ ಅಭಿಪ್ರಾಯವನ್ನು ಬರೆಯಿರಿ ?

36.ಶಬರಿಯ ಚಿಂತೆ ಹಿಂಗಿಹೋದ ಸಂದರ್ಭದ ಸ್ವಾರಸ್ಯವನ್ನು ವಿವರಿಸಿ.

37.ಲಂಡನ್ ನಗರ ವೀಕ್ಷಣೆಯಲ್ಲಿ ಲೇಖಕರು ಗುರುತಿಸಿರುವ ವಿಶೇಷತೆಗಳೇನು ?

38.ಮೈಸೂರು ರಾಜ್ಯದ ಸರ್ವತೋಮುಖ ಅಭಿವೃದ್ಧಿಯಲ್ಲಿ ವಿಶ್ವೇಶ್ವರಯ್ಯ ನವರ ಕೊಡುಗೆಯನ್ನು ಕುರಿತು ಬರೆಯಿರಿ.

39.ಬುದ್ಧನ ಕಾರುಣ್ಯ ತಮ್ಮ ಮನದಲ್ಲಿ ಕೂತ ಬಗೆಯನ್ನು ದೇವನೂರ ಮಹಾದೇವರು ಹೇಗೆ ವಿವರಿಸಿದ್ದಾರೆ

40.ಶಾನುಭೋಗರರು ಉಳಿದುದು ಪುಸ್ತಕದಿಂದಲೋ ಹುಲಿಯ ಧರ್ಮಶ್ರದ್ಧೆಯಿಂದಲೋ? ಸಮರ್ಥನೆಯೊಂದಿಗೆ ವಿವರಿಸಿ.

41.ಸತ್ಯವು ಜಯವನ್ನು ತಂದುಕೊಡುತ್ತದೆ ಎಂಬುದನ್ನು ವೃಕ್ಷಸಾಕ್ಷಿ ಪಾಠದಿಂದ ಸಮರ್ಥಿಸಿ.

42.ಸುಕುಮಾರ ಎಂಬ ಹೆಸರು ಸುಕುಮಾರ ಸ್ವಾಮಿಗೆ ಹೇಗೆ ಅನ್ವರ್ಥವಾಗುತ್ತದೆ? ವಿವರಿಸಿ.

43.ಈ.ಎಸ್.ಶಿವರುದ್ರಪ್ಪನವರ ಪ್ರಕಾರ ಬದುಕಿನಲ್ಲಿ ನಾವು ಯಾವ ಸಂಕಲ್ಪವನ್ನುಕೈಗೊಳ್ಳಬೇಕೆಂದು ಹೇಳಿದ್ದಾರೆ ?

44.ದ.ರಾ.ಬೇಂದ್ರೆಯವರು ಹಕ್ಕಿಯನ್ನು ಕಾಲಗತಿಗೆ ಹೇಗೆ ಸಮೀಕರಿಸಿದ್ದಾರೆ ಸೃಷ್ಟೀಕರಿಸಿ.

45.ಹಲಗಲಿಬೇಡರ ದಂಗೆಗೆ ಕಾರಣವಾದ ಅಂಶಗಳು ಹಾಗೂ ಪರಿಣಾಮಗಳನ್ನು ವಿವರಿಸಿ ?

46.ಪಾಂಡವರು ಸೋದರರೆಂದು ತಿಳಿದಾಗ ಕರ್ಣನ ಮನ ಸ್ಥಿತಿಯನ್ನು ತಿಳಿಸಿ ?

47.ಕವಿ ಕುವೆಂಪುರವರ ಮನದಲ್ಲಿ ಮೂಡಿರುವ ಹಸುರಿನ ವಿಶೇಷಭಾವವನ್ನು ಕುರಿತು ಬರೆಯಿರಿ.

48.ಭೀಷ್ಮ ಮತ್ತು ದುರ್ಯೋಧನರ ನಡುವಿನ ಸಂಭಾಷನೆಯ ಸ್ವಾರಸ್ಯವನ್ನು ವಿವರಿಸಿ.

49.ಲವನ ವೀರತೆಯ ಗುಣವನ್ನು ನಿಮ್ಮ ಮಾತುಗಳಲ್ಲಿ ವಿವರಿಸಿ.

50.ಅಧಿಕಾರ ಮದದಿಂದ ಮನುಷ್ಯನ ವಿವೇಕ ಶೂನ್ಯವಾಗುತ್ತದೆಂಬ ಸಂಗತಿಯನ್ನು ದ್ರೋಣದ್ರುಪದರ ಸಂವಾದದ ಹಿನ್ನಲೆಯಲ್ಲಿ ಚರ್ಚಿಸಿ?

ಭಾಗ- ಬಿ

VIII.ವ್ಯಾಕರಣಾಂಶಗಳು, ಛಂದಸ್ಸು ಮತ್ತು ಅಲಂಕಾರಗಳು:

ವರ್ಣಮಾಲೆ

* ಅನುನಾಸಿಕ ಅಕ್ಷರಗಳು (5):- ವರ್ಗದ ಕೊನೆಯ ಅಕ್ಷರಗಳು (ಙ,ಞ,ಣ,ನ,ಮ)

* ಸಂಧ್ಯಕ್ಷರಗಳು(2):- ಐ,ಔ.

* ಮಹಾಪ್ರಾಣಾಕ್ಷರಗಳು(10):- ವರ್ಗದ ಎರಡನೇ ಹಾಗೂ ನಾಲ್ಕನೇ ಅಕ್ಷರಗಳು (ಖ,ಘ,ಛ,ಝ,ಠ,ಢ,ಥ,ಧ,ಫ,ಭ)

ನಾಮಪದಗಳು

ರೂಢನಾಮ	ಅಂಕಿತನಾಮ	ಅನ್ವರ್ಥನಾಮ
ನದಿ	ಕಾವೇರಿ	ಶಿಕ್ಷಕ
ಹುಡುಗಿ	ಸುನಂದ	ವ್ಯಾಪಾರಿ

ಪರ್ವತ	ಹಿಮಾಲಯ	ಕಿವುಡ
ದೇಶ	ಭಾರತ	ವಿದ್ವಾಂಸ

ಸರ್ವನಾಮಗಳು

* ಪುರುಷವಾಚಕ ಸರ್ವನಾಮಗಳು:- ನಾನು,ನಾವು, ನೀನು, ನೀವು, ಅವನು, ಅವರು.

* ಆತ್ಮಾರ್ಥಕ ಸರ್ವನಾಮಗಳು:- ತಾನು, ತಾವು, ತನ್ನ, ತಮ್ಮ.

* ಪ್ರಶ್ನಾರ್ಥಕ ಸರ್ವನಾಮಗಳು;- ಏನು,ಯಾರು, ಎಲ್ಲಿ, ಯಾವುದು.

ವಿಭಕ್ತಿ ಪ್ರತ್ಯಯಗಳು

ವಿಭಕ್ತಿ	ಪ್ರತ್ಯಯ	ಉದಾಹರಣೆ	ಕಾರಕಾರ್ಥ
ದ್ವಿತೀಯಾ	ಅನ್ನು/ಅಮ್/ಅಂ	ಮರವನ್ನು/ಮರನಂ	ಕರ್ಮಾರ್ಥ
ಚತುರ್ಥೀ	ಗೆ/ಕ್ಕೆ/ಇಗೆ	ಮರಕ್ಕೆ/ಮರಂಗೆ	ಸಂಪ್ರದಾನ
ಪಂಚಮೀ	ದೆಸೆಯಿಂದ/ಅತ್ತಣಿಂ	ಮರದ ದೆಸೆಯಿಂದ/ ಮರದತ್ತಣಿಂ	ಅಪಾದಾನ
ಸಪ್ತಮೀ	ಅಲ್ಲಿ/ಒಳ್	ಮರದಲ್ಲಿ/ಮರದೊಳ್	ಅಧಿಕರಣ

ಕ್ರಿಯಾರ್ಥಕಗಳು

ವಿದ್ಯರ್ಥಕ	ನಿಷೇಧಾರ್ಥಕ	ಸಂಭವನಾರ್ಥಕ
ಮಾಡಲಿ	ಮಾಡನು/ಮಾಡಳು/ಮಾಡವು	ಮಾಡಿಯಾನು/ಮಾಡಿಯಾಳು/ಮಾಡಿಯಾವು

ದ್ವಿರುಕ್ತಿಗಳು

ವಿಶೇಷಾರ್ಥವನ್ನು ವ್ಯಕ್ತಪಡಿಸುವುದಕ್ಕಾಗಿ ಒಂದು ಪದವನ್ನು ಎರಡೆರಡು ಬಾರಿ ಪ್ರಯೋಗಿಸುವ ಪದಗಳು.

ಉದಾ:- ದೊಡ್ಡದೊಡ್ಡ, ಮೆಲ್ಲಮೆಲ್ಲನೆ, ಅಬ್ಬಬ್ಬಾ, ಮೊತ್ತಮೊದಲು, ಕಟ್ಟಕಡೆ, ತುತ್ತತುದಿ, ಬಟ್ಟಬಯಲು.

ಜೋಡುನುಡಿಗಳು

ಬೇರೆ ಬೇರೆ ಪದಗಳನ್ನು ಜೊತೆಜೊತೆಯಲ್ಲಿ ಬಳಸುವ ಪದಗಳು.

ಉದಾ:- ಸತಿಪತಿ, ಹಾಲ್ಜೇನು, ಕೆನೆಮೊಸರು, ಕಾಫಿಗೀಪಿ, ಹುಳಹುಪ್ಪಡಿ.

ಸಂಧಿಗಳು

* ಲೋಪಸಂಧಿ:- ಬಲ್ಲೆನೆಂದು, ಊರೂರು.
* ಆಗಮಸಂಧಿ: - ಶಾಲೆಯಲ್ಲಿ, ಮಗುವಿಗೆ.
* ಆದೇಶಸಂಧಿ:- ಮೈದೋರು, ಬೆಂಬತ್ತು, ಕಡುವೆಳ್ಪು, ಮೆಲ್ಪಾತು.
* ಸವರ್ಣದೀರ್ಘಸಂಧಿ:- ಮಹಾತ್ಮ, ಗಿರೀಶ, ವಧೂಪೇತ.
* ಗುಣಸಂಧಿ:- ದೇವೇಂದ್ರ, ಸೂರ್ಯೋದಯ, ಮಹರ್ಷಿ.
* ವೃದ್ಧಿಸಂಧಿ:- ಏಕೈಕ, ವನೌಷಧ.
*ಯಣ್ ಸಂಧಿ:- ಜಾತ್ಯತೀತ, ಪಿತ್ರಾರ್ಜಿತ, ಮನ್ವಂತರ.
* ಜಶ್ತ್ವಸಂಧಿ ;- ವಾಗ್ದೇವಿ, ದಿಗಂತ, ಅಜಂತ, ಷಡಾನನ, ಚಿದಾನಂದ, ಅಬ್ಧಿ.
* ಶ್ಚುತ್ವಸಂಧಿ :- ಜಗಜ್ಜೋತಿ, ಶರಚ್ಚಂದ್ರ. ಪಯಶ್ಶಯನ.
* ಅನುನಾಸಿಕಸಂಧಿ ;- ವಾಙ್ಮಯ, ಷಣ್ಮುಖ, ಸನ್ಮಾನ.

ಸಮಾಸಗಳು

* ತತ್ಪುರುಷ ಸಮಾಸ :- ತಲೆನೋವು, ವಯೋವೃದ್ಧ, ಬೆಟ್ಟದಾವರೆ,
* ಕರ್ಮಧಾರಯ ಸಮಾಸ :- ಕೆಂದಾವರೆ, ಕಟ್ಟೇಕಾಂತ, ಇಮ್ಮಾವು, ಮೆಲ್ಪಾತು, ದಿವ್ಯಶರಾಳಿ,.
* ದ್ವಿಗು ಸಮಾಸ :- ಮೂಗಾವುದ, ಮುಕ್ಕಣ್ಣು, ನಾಲ್ವಡಿ, ಪಂಚೇಂದ್ರಿಯಗಳು.
* ಬಹುವ್ರೀಹಿ ಸಮಾಸ :- ಭೂಮಿಜಾತೆ, ಜಟಿಲಕಬರಿ, ನಾಣಿಲಿ, ಅಂತಕಾತ್ಮಜ, ಅಬ್ಜೋದರ .
* ಅಂಶಿ ಸಮಾಸ :- ಅಂಗೈ, ಹಿಂದಲೆ, ಕಡೆಗಣ್ಣು, ನಟ್ಟಿರುಳು.
* ದ್ವಂದ್ವ ಸಮಾಸ :- ಗಿರಿವನದುರ್ಗಗಳು, ಮಾದ್ರಮಾಗಧಯಾದವರು. ಕರಿತುರಗರಥಗಳು, ಪಾರ್ಥಭೀಮರು.
* ಕ್ರಿಯಾ ಸಮಾಸ :- ಹೊಗೆದೋರು, ಮೋಸಮಾಡು, ಕೈಯಾನು, ಕಂಗೆಡು, ಸೊಲ್ಗೇಳಿ, ಕಳ್ಗುಡಿದ.
* ಗಮಕ ಸಮಾಸ :- ಆ ಕಲ್ಲು, ನೇಯ್ದವಸ್ತ್ರ, ಜೀರ್ಣವಸ್ತ್ರ.

ಅನ್ಯದೇಶೀಯ ಪದಗಳು

* ಫಾರ್ಸಿ/ಪರ್ಶಿಯನ್ :- ಅಬಕಾರಿ, ದವಾಖಾನೆ, ಅಜಮಾಯಿಸಿ, ಜಮೀನು,
* ಪೋರ್ಚುಗೀಸ್ :- ತಂಬಾಕು, ಸಾಬೂನು, ಚಾ, ಚೊಂಬು, ಅನಾನಸು.
* ಉರ್ದು :- ತಾರೀಖು, ತಾಲೂಕು, ರುಜು, ಅಹವಾಲು.
* ಹಿಂದೂಸ್ಥಾನಿ :- ಕಾಗದ, ಕಾರ್ಖಾನೆ, ಕಛೇರಿ, ಹುಕುಂ.

ತತ್ಸಮ- ತಭ್ಭವಗಳು

ವಂಶ – ಬಂಚ,	ಕೋಕಿಲ - ಕೋಗಿಲೆ
ಸ್ಥಾನ – ತಾಣ	ದ್ಯೂತ – ಜೂಜು
ಯಶ – ಜಸ	ಪಾದುಕಾ - ಹಾವುಗೆ
ಪಟ್ಟಣ – ಪತ್ತನ	ಯಜ್ಞ - ಜನ್ನ
ಅರ್ಕ – ಎಕ್ಕ	ವಂಧ್ಯಾ - ಬಂಜೆ
ಕುಠಾರ – ಕೊಡಲಿ	ಚೀರ - ಸೀರೆ
ಶಶಿ – ಸಸಿ	ಪ್ರತೀಹಾರ - ಪಡಿಯರ
ಸಂದೇಹ – ಸಂದೆಯ	ವ್ಯಾಪಾರಿ - ಬೇಹಾರಿ

ವಾಕ್ಯ ಪ್ರಕಾರಗಳು

* **ಸಾಮಾನ್ಯ ವಾಕ್ಯ** :- ಒಂದು ಪೂರ್ಣ ಕ್ರಿಯಾಪದದೊಂದಿಗೆ ಸ್ವತಂತ್ರವಾಗಿರುವ ವಾಕ್ಯವೇ ಸಾಮಾನ್ಯ ವಾಕ್ಯ.

ಉದಾ :- ವಿಶ್ವೇಶ್ವರಯ್ಯನವರು ಬೆಂಗಳೂರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತನ್ನು ಸ್ಥಾಪಿಸಿದರು.

* **ಸಂಯೋಜಿತ/ಸಂಯುಕ್ತ ವಾಕ್ಯ** :- ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಾಭಿಪ್ರಾಯದ ವಾಕ್ಯವಾಗಿದ್ದರೆ ಅದು ಸಂಯೋಜಿತ ವಾಕ್ಯ.

ಉದಾ :- ಹುಲಿ ಪ್ರಾಣಿಗಳನ್ನು ಕೊಂದು ತಿನ್ನುವುದೇನೋ ಉಂಟು ಆದರೆ ನಿಷ್ಪಕ್ಷಪಾತವಾಗದ ದೃಷ್ಟಿಯಿಂದ ನೋಡಿದರೆ ಅದರಲ್ಲಿ ತಪ್ಪಿಲ್ಲ.

* **ಮಿಶ್ರ ವಾಕ್ಯ** :- ಒಂದು ಪ್ರಧಾನ ವಾಕ್ಯಕ್ಕೆ ಒಂದು ಅಥವಾ ಅನೇಕ ಅಧೀನ ವಾಕ್ಯಗಳಿದ್ದರೆ ಅಂತಹ ವಾಕ್ಯವನ್ನು ಮಿಶ್ರವಾಕ್ಯ ಎನ್ನತ್ತೇವೆ.

ಲೇಖನ ಚಿಹ್ನೆಗಳು

* **ಉದ್ಧರಣ :-** ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಬಳಸುವ ಚಿಹ್ನೆ.

ಉದಾ :- " ಹಳ್ಳಿಗಳ ಉದ್ಧಾರವೇ ದೇಶದ ಉದ್ಧಾರ " ಎಂದು ಗಾಂಧೀಜಿ ಹೇಳಿದ್ದಾರೆ.

* **ಅರ್ಧವಿರಾಮ** :- ಅನೇಕ ಉಪವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದಾಗ ಉಪವಾಕ್ಯಗಳುಮುಗಿದಾಗಲೆಲ್ಲ ಬಳಸುವ ಚಿಹ್ನೆ.

* **ವಾಕ್ಯವೇಷ್ಟನ** :- ಪಾರಿಭಾಷಿಕ ಪದಗಳನ್ನು ಬಳಸುವಾಗ, ಪ್ರಮುಖ ಪದಗಳನ್ನು ಸೂಚಿಸುವಾಗ ಬಳಸುವ ಚಿಹ್ನೆ.

ಉದಾ :- ' ಚೇರಿಂಗ್ ಕ್ರಾಸ್ ' ಎಂಬ ಓಣಿಯಲ್ಲಿ ಆಂಗ್ಲ ಸಾಮ್ರಾಜ್ಯ ವೈಭವವು ಕಂಡುಬರುತ್ತದೆ.

ಅವ್ಯಯಗಳು

* ಕ್ರಿಯಾರ್ಥಕಾವ್ಯಯ :- ಅಹುದು, ಸಾಕು, ಉಂಟು.

* ಸಂಬಂಧಾರ್ಥಕಾವ್ಯಯ :- ಮತ್ತು, ಅಥವಾ, ಅಲ್ಲದೆ.

* ಅವಧಾರಣಾರ್ಥಕಾವ್ಯಯ :- ಅವನೇ, ಅದುವೇ, ನೀನೇ.

* ಅನುಕರಣಾವ್ಯಯ :- ಧಗಧಗ, ರೊಯ್ಯನೆ, ಸುಯ್ಯನೆ,

ಕೃದಂತಗಳು

ಕೃದಂತನಾಮ	ಕೃದಂತ ಭಾವನಾಮ	ಕೃದಂತಾವ್ಯಯ
ಓಡುವ	ಓಟ	ಓಡುತ
ಅಂಜಿದ	ಅಂಜಿಕೆ	ಅಂಜಲಿಕ್ಕೆ
ಉಡುವ	ಉಡುಗೆ	ಉಡಲು

ತದ್ಧಿತಾಂತಗಳು

ತದ್ಧಿತಾಂತನಾಮ	ತದ್ಧಿತಾಂತ ಭಾವನಾಮ	ತದ್ಧಿತಾಂತಾವ್ಯಯ
ಸಿರಿವಂತ	ಸಿರಿತನ	ಸಿರಿತನಕ್ಕಾಗಿ
ಬಳೆಗಾರ	ಚೆಲುವಿಕೆ	ಚೆಲುವಿನಂತೆ
ಕನ್ನಡಿಗ	ಪೆರ್ಮೆ	ನಿನಗಾಗಿ

ಗ್ರಾಂಥಿಕ ರೂಪ

ಇಸವಾಸ - ವಿಶ್ವಾಸ

ಕಳುವ್ಯಾರೆ – ಕಳುಹಿಸಿದ್ದಾರೆ

ಇಲ್ಲದ್ದಂಗ – ಇಲ್ಲದ ಹಾಗೆ

IX ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿಯರಿ:

1.ಮೇಧಿನಿಯಂ ಕ್ರಮಕ್ರಮದೆ ಪರ್ವಿದುದಾತ್ತ ನಭೋವಿಭಾಗಮಾ

ಉತ್ಪಲಮಾಲಾವೃತ್ತ

2.ಎನ್ನಣುಗಾಳನೆನ್ನಣುಗದಮ್ಮನನಿಕ್ಕಿದ ಪಾರ್ಥಭೀಮರು

ಉತ್ಪಲಮಾಲಾವೃತ್ತ

3.ಒಡವೆಯನರ್ಥಿಗಿತ್ತೆನವನೀತಳಮಂ ಗುರುಗಿತ್ತೆನೀಗಳೊಂ

ಚಂಪಕಮಾಲಾವೃತ್ತ

4.ಅರಿಯಿರೆ ನೀನುಮಾಮುಮೊಡನೋದಿದೆವೆಂಬುದಣ್ಣ ನಿನ್ನ ನಾ

ಚಂಪಕಮಾಲಾವೃತ್ತ

5.ನುಡಿ ತಡವಪ್ಪುದೊಂದು ಮೊಗದೊಳ್ ಮರುಕಂ ದೊರೆಕೊಳ್ಳುದೊಂದು

ಚಂಪಕಮಾಲಾವೃತ್ತ

6.ಖಳನೊಳವಿಂಗೆ ಕುಪ್ಪೆ ವರಮೆಂಬವೊಲಾಂಬರಮುಂಟೆ ನಿನ್ನದೊಂ

ಚಂಪಕಮಾಲಾವೃತ್ತ

7.ಅತಿಕಟಿಲಮನಂ ಧನಲು

ಬ್ದತೆಯಿಂದಂ ದುಷ್ಟಬುದ್ಧಿ ನುಡಿದಂ ಪುಸಿಯಂ

ಕಂದಪದ್ಯ

8.ನೆಲಕಿರಿವೆನೆಂದು ಬಗೆದಿರೆ

ಚಲಕಿರಿವೆಂ ಪಾಂಡುಸುತರೊಳೀನೆಲನಿದು ಪಾ

ಕಂದಪದ್ಯ

9.ಲಲನೆ ಪಡೆದೀಯೈದು ಮಂತ್ರಂ

ಗಳಲಿ ಮೊದಲಿಗ ನೀನು ನಿನ್ನಯ

ಬಳಿ ಯುಧಿಷ್ಠಿರದೇವ ಮೂರನೆಯಾತ ಕಲಿಭೀಮ

ಭಾಮಿನಿಷಟ್ಪದಿ

10.ಎತ್ತಣ ತುರಂಗಮಿದು ಪೊಕ್ಕು ಪೂದೋಟಮಂ

ತೊತ್ತಳದುಳಿದುದು ವಾಲ್ಮೀಕಿ ಮುನಿನಾಥನೇ

ಪೊತ್ತುಮಾರೈವುದೆಂದೆನಗೆ ನೇಮಿಸಿ ಪೋದನಬ್ಧಿಪಂ ಕರೆಸಲಾಗಿ

ವಾರ್ಧಕಷಟ್ಪದಿ

11. ಉತ್ಸಾಹ ರಗಳೆ

ಕುಳಿರ್ವಪೊಗೊಳಂಗಳಲ್ಲಿ

ತಳಿರ ಕಾವಣಂಗಳಲ್ಲಿ

ತುಂಬಿವಿಂಡಿನಂತೆ ಪಾಡಿ

ಜಕ್ಕವಕ್ಕಿಯಂತೆ ಕೂಡಿ

12. ಮಂದಾನಿಲ ರಗಳೆ

ಆಡುವಗುಂಡಯ್ಯನ ಹೊಸನೃತ್ಯಂ

ನೋಡುವ ಶಿವನಂ ಮುಟ್ಟಿತು ಸತ್ಯಂ

ಸುಖದಾ ಟಂತನ್ನುಂಟೆಂಬತ್ತಲ್

ಸುಖಮುಖದಿಂದಂಮನಮಂಸುತ್ತಲ್

13.ಲಲಿತ ರಗಳೆ

ಅಳಿಯೆರಗದನಿಲನಲು ಗದರವಿಕ ರಂಪುಗದ

ಸುಳಿಗೊಂಡು ದಳವೇರಿ ಹಸುರಳಿದು ಬೆಳುಪುಳಿದ

ಸುರುಚಿರುಮೆನಿಪ್ಪಮೀಸಲಮೊಗ್ಗೆಯಂಕೊಡು

ಇರುವಂತಿಯೊಳ್‌ಮೆರೆವ ಬಿರಿಮುಗುಳ್ಗಳಂಕೊಬೆ

14.ಶಾರ್ದೂಲ ವಿಕ್ರೀಡಿತ ವೃತ್ತ

ಇಂತೀಕಾವ್ಯಮನೊಲ್ದುಕೇಳ್ದವಿಭುಧರ್ ಮೈವೆರ್ಚಿ

15.ಮತ್ತೇಭವಿಕ್ರೀಡಿತ ವೃತ್ತ

ಕಲವೆಂಬಲ್ಲವರಿಂದಕಲ್ಲುಕೆಲವಂಶಾಸ್ತ್ರಂ

16.ಸ್ರಗ್ಧರಾವೃತ್ತ

ಕಾರುಣ್ಯಂ ಗೆಯ್ದುಸದ್ದೀಕ್ಷೆಯನೆಸಗಿ

17.ಮಹಾಸ್ರಗ್ಧರಾವೃತ್ತ

ಚಲದೊಳ್ ದುರ್ಯೊಧನಂನನ್ನಿಯೊಳಿನ

<u>X. ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಿಸಿ:</u>

1.ಪ್ರೀತಿಯ ಹಣತೆಯ ಹಚ್ಚೋಣ

ರೂಪಕಾಲಂಕಾರ

2.ಆತ್ಮ ಸುರಭಿ

ರೂಪಕಾಲಂಕಾರ

3.ಮಾರಿಗೌತಣವಾಯ್ತು ನಾಳಿನ ಭಾರತವು

4.ವದನಾರವಿಂದ

5.ಅಳ್ಳಿರಿಯುತಿಪ್ಪ ಎಮ್ಮ ಒಡಲಬೇಗೆಯ ಬೆಂಕಿಯುರಿ ನಿನ್ನನಿರಿಯದೆ ಪೇಳು ವಿಶ್ವಾಮಿತ್ರ

6.ಒಳಗಿನ ಮಂದಿ ಗುಂಡು ಹೊಡಿದರೊ ಮುಂಗಾರಿ ಸಿಡಿಲ ಸಿಡಿದಾಂಗ

ಉಪಮಾಲಂಕಾರ

7.ಭೀಮ ದುರ್ಯೋಧನರು ಮದಗಜಗಳಂತೆ ಹೋರಾಡಿದರು

8.ನೊಳವಿಂಗೆ ಕುಪ್ಪೆ ವರಮೆಂಬವೊಲಾಂಬರಮುಂಟೆ ನಿನ್ನದೊಂದಳವು

9.ಸಿತೆಯ ಮುಖ ಕಮಲವೋ ಎಂಬಂತೆ ಅರಳಿತು

ಉತ್ಪ್ರೇಕ್ಷಾಲಂಕಾರ

10.ಮಾತು ಬಲ್ಲವನಿಗೆ ಜಗಳವಿಲ್ಲ ; ಊಟ ಬಲ್ಲವನಿಗೆ ರೋಗವಿಲ್ಲ.

ದೃಷ್ಟಾಂತಾಲಂಕಾರ

11. ಶ್ಲೇಷ

1 ಅತಿಶಯ ಪದಾರ್ಥ ನಿಕರ

ಪ್ರತೀತಿಯಂ ಪಡೆವ ಪಾದವಿನ್ಯಾಸಂ ಭೂ

ನುತಮಾಗದಲ್ತೆನಿರ್ದೋ

ಪತೆಯಿಂದಲ್ಲದೆ ಸಮಂತು ಕವಿಗಂ ರವಿಗಂ

2. ವಿವಾಹ ಮಂಟಪವು ಪುರಂದರ ಪುರದಂಎ ಸದಾ

ರಂಭಾನ್ವಿತ ವಿಭುಧ ಮಿಳಿತವಾಗಿತ್ತು.

3. ಕುರುಕುಲಾರ್ಕನುಂ ಅರ್ಕನಂ ಅಸ್ತಮೆಯ್ದಿದರ್

12. ಉತ್ಪ್ರೇಕ್ತ

1. ಅಚ್ಚೋದ ಸರೋವರವು ತ್ರೈಲೋಕ್ಯಲಕ್ಷ್ಮೀಯು ತನ್ನ

ಸೌಂದರ್ಯವನ್ನು ನೋಡಲು ಮಾಡಿಟ್ಟ ರನ್ನಗನ್ನಡಿಯೋ

ಎಂಬಂತೆ ಶೋಭಿಸಿತು.

2. ಸೀತೆಯ ಮುಖ ಕಮಲವೋ ಎಂಬಂತೆ ಅರಳಿತು.

13.ದೃಷ್ಟಾಂತ

1. ಊರು ಉಪಕಾರ ಅರಿಯದು : ಹೆಣ ಶೃಂಗಾರ ಅರಿಯದು

14. ಅರ್ಥಂತರನ್ಯಾಸ

1. ಆತನು ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದು ಉತ್ತೀರ್ಣನಾದನು. ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ ?

2. ಲವಕುಶರು ಎದುರಾಳಿಯೊಂದಿಗೆ ಯುದ್ಧಕ್ಕೆ ಸಿದ್ಧರಾದರು. ಕ್ಷತ್ರಿಯರು ಯುದ್ಧಕ್ಕೆ ಎದುರುವುದಿಲ್ಲ.

XI.ಈ ಕೆಳಗೆ ಕೊಟ್ಟಿರುವ ಗಾದೆಗಳನ್ನು ವಿಸ್ತರಿಸಿ ಬರೆಯಿರಿ:

ಸೂಚನೆ :- ಗಾದೆಗಳನ್ನು ಮೂರು ವೃಂದಗಳಲ್ಲಿ ಬರೆಯಬೇಕು. 1.ಪೀಠಿಕೆ (ಗಾದೆಯ ಅರ್ಥ ಮತ್ತು ಮಹತ್ವ) 2.ಗಾದೆಯ ಒಳ, ಹೊರ ಅರ್ಥಗಳು, 3.ಪೂರಕ ಉದಾಹರಣೆ/ಕಥೆಯೊಂದಿಗೆ ಗಾದೆಯ ವಿಶ್ಲೇಷಣೆ.

1.ತಾಳಿದವನು ಬಾಳಿಯಾನು.

2.ಮನಸ್ಸಿದ್ದರೆ ಮಾರ್ಗ .

3.ಕೈ ಕೆಸರಾದರೆ ಬಾಯಿ ಮೊಸರು.

4.ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ.

5.ಮಾಡಿದ್ದುಣ್ಣೋ ಮಹಾರಾಯ.

6.ಕೂಡಿ ಬಾಳಿದರೆ ಸ್ವರ್ಗ ಸುಖ.

7.ಕಟ್ಟುವುದು ಕಠಿಣ, ಕೆಡಹುವುದು ಸುಲಭ.

8.ಹೆತ್ತ ತಾಯಿ ಹೊತ್ತ ನಾಡು ಸ್ವರ್ಗಕ್ಕಂತ ಮಿಗಿಲು.

9.ಸತ್ಯಕ್ಕೆ ಸಾವಿಲ್ಲ ; ಸುಳ್ಳಿಗೆ ಸುಖವಿಲ್ಲ.

10.ಆಳಾಗಬಲ್ಲವನು ಅರಸಾಗಬಲ್ಲವನು.

11.ಮಾತೇ ಮುತ್ತು ; ಮಾತೇ ಮೃತ್ಯು.

12.ಶಕ್ತಿಗಿಂತ ಯುಕ್ತಿ ಮೇಲು.

13. ದೇಶಸುತ್ತು,ಕೋಶ ಓದು

14. ಹುಟ್ಟುಗುಣ ಛಟ್ಟ ಹತ್ತಿದರು ಹೋಗದು

15. ಹಣಕ್ಕಿಂತ ಗುಣಮೇಲು.

XII.ಈ ಕೆಳಗಿನ ವಿಷಯಗಳಿಗೆ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ರಚಿಸಿ:

ಸೂಚನೆ:- ಪ್ರಬಂಧವನ್ನು ರಚಿಸುವಾಗ ಮೂರು ಹಂತಗಳಲ್ಲಿ ಬರೆಯಬೇಕು.

ಅ).ಪೀಠಿಕೆ/ಪ್ರಸ್ತಾವನೆ ಆ) .ವಿಷಯ ನಿರೂಪಣೆ/ಬೆಳವಣಿಗೆ ಇ).ಮುಕ್ತಾಯ/ಉಪಸಂಹಾರ

1.ರಾಷ್ಟ್ರೀಯ ಹಬ್ಬಗಳ ಮಹತ್ವ.

2.ಗ್ರಂಥಾಲಯಗಳ ಮಹತ್ವ.

3.ಸಾಮಾಜಿಕ ಪಿಡುಗುಗಳು.

4.ಸ್ವಚ್ಛಭಾರತ ಅಭಿಯಾನ.

5.ಪ್ರಾಚ್ಯ ಸ್ಮಾರಕಗಳ ಸಂರಕ್ಷಣೆ.

6.ರಾಷ್ಟ್ರೀಯ ಭಾವೈಕ್ಯ.

7.ತ್ಯಾಜ್ಯವಸ್ತು ನಿರ್ವಹಣೆ.

8.ಮಹಿಳಾ ಸಬಲೀಕರಣ.

9.ಅಕ್ಷರ ದಾಸೋಹ ಮತ್ತು ಕ್ಷೀರ ಭಾಗ್ಯಗಳ ಸಾಮಾಜಿಕ ಮಹತ್ವ.

10.ಪರಿಸರ ವಿಪತ್ತುಗಳ ನಿರ್ವಹಣೆ.

11.ಸಾವಯವ ಕೃಷಿ ಪದ್ದತಿ

12.ಜ್ಞಾನಭಿವೃದ್ಧಿಯಲ್ಲಿ ಮೊಬೈಲ್‌ಗಳ ಪಾತ್ರ

XIII.ಪತ್ರ ಬರವಣಿಗೆ:

ಸೂಚನೆ :- ಪತ್ರಗಳು ಈ ಕೆಳಗಿನ ಅಂಶಗಳನ್ನು ಒಳಗೊಂಡಿರಬೇಕು.

ವೈಯಕ್ತಿಕ ಪತ್ರ	**ವ್ಯಾವಹಾರಿಕ ಪತ್ರ**
1.ಕ್ಷೇಮ	1.ಇಂದ ವಿಳಾಸ
2.ಇಂದ ವಿಳಾಸ	2.ಗೆ ವಿಳಾಸ
3.ದಿನಾಂಕ	3.ದಿನಾಂಕ
4.ಸಂಬೋಧನೆ	4.ಸಂಬೊಧನೆ
5.ಪತ್ರದ ಒಡಲು	5.ವಿಷಯ
6.ಮುಕ್ತಾಯದ ಒಕ್ಕಣೆ ಮತ್ತು ಸಹಿ	6.ಪತ್ರದ ಒಡಲು
7.ಹೊರ ವಿಳಾಸ	7.ಮುಕ್ತಾಯದ ಒಕ್ಕಣೆ ಮತ್ತು ಸಹಿ

1.ನೀವು ಕೋಲಾರಧ ಪಿ.ಸಿ ಬಡಾವಣೆಯ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ ಚೇತನ ಎಂದು ತಿಳಿದು, ಮುಳಬಾಗಿಲಿನ ಮುತ್ಯಾಲಪೇಟೆಯಲ್ಲಿರುವ ವೆಂಕಟೇಶ್ ಎಂಬುವರು ನಿಮ್ಮ ತಂದೆ ಎಂದು ಭಾವಿಸಿ ಅವರಿಗೆ ಶೈಕ್ಷಣಿಕ ಪ್ರವಾಸಕ್ಕಾಗಿ 1000 ರೂ.ಗಳನ್ನು ಕಳುಹಿಸುವಂತೆ ಕೋರಿ ಒಂದು ಪತ್ರವನ್ನು ಬರೆಯಿರಿ.

2.ನೀವು ಚಿತ್ರದುರ್ಗದ ಕೋಟೆ ಬಡಾವಣೆಯ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ ಸಮರ್ಥ ಎಂದು ಭಾವಿಸಿ , ಕೋಲಾರದ ಗಲ್ ಪೇಟೆಯಲ್ಲಿರುವ ವಿಮಲ ಎಂಬುವರು ನಿಮ್ಮ ತಾಯಿಯೆಂದು ಭಾವಿಸಿ, ನಿಮ್ಮ ಪರಿಕ್ಷಾ ಸಿದ್ಧತೆಯ ಬಗ್ಗೆ ತಿಳಿಸುತ್ತಾ ಒಂದು ಪತ್ರ ಬರೆಯಿರಿ.

3.ನಿಮ್ಮನ್ನು ಬೆಂಗಳೂರಿನ ಜಯನಗರದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ ಹಿತಾರ್ಥ್ ಎಂದು ತಿಳಿದು, ನಿಮ್ಮ ಶಾಲೆಯಲ್ಲಿ ನಡೆದ ಪರಿಸರ ದಿನಾಚರಣೆ/ಸ್ವಾತಂತ್ರ್ಯ ದಿನಾಚರಣೆ/ಮಕ್ಕಳ ದಿನಾಚರಣೆಯ

ಕಾರ್ಯಕ್ರಮದ ವರದಿಯನ್ನು ಪ್ರಕಟಿಸುವಂತೆ ಕೋರಿ ವಿಜಯವಾಣಿ ಪತ್ರಿಕೆಯ ಸಂಪಾದಕರಿಗೆ ಒಂದು ಪತ್ರ ಬರೆಯಿರಿ.

4.ನೆರೆ ಹಾವಳಿಯಿಂದ ನೊಂದ ಸಂತ್ರಸ್ತರಿಗೆ ಪರಿಹಾರ ದೊರಕಿಸಿಕೊಡುವಂತೆ ಕೋರಿ ಜಿಲ್ಲಾಧಿಕಾರಿಗಳಿಗೆ ಒಂದು ಪತ್ರ ಬರೆಯಿರಿ.